ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 6-21
©*IIMRD*, Mysuru

IIMRD JOURNALS
www.iimrd.com

# ಮ್ಯಾಸಬೇಡರ ಸಂಸ್ಕೃತಿಯಲ್ಲಿ ರೊಪ್ಪಗಳು, ದೇವರೆತ್ತುಗಳು ಮತ್ತು ಕಿಲಾರಿಗಳ ಪರಂಪರೆ

**ಡಾ. ವೀಣಾ ಕೆ.ಆರ್**
ಪ್ರಾಚಾರ್ಯರು ಮತ್ತು ಕನ್ನಡ ಸಹ ಪ್ರಾಧ್ಯಾಪಕರು, ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ ಹಾಗೂ ಸಂಶೋಧನಾ ಮಾರ್ಗದರ್ಶಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಸಾರಾಂಶ: (Abstract)**

*ಕರ್ನಾಟಕದ ಅನೇಕ ಬುಡಕಟ್ಟು ಸಂಸ್ಕೃತಿಗಳಲ್ಲಿ ಮ್ಯಾಸಬೇಡರ ಸಂಸ್ಕೃತಿಯು ವಿಶಿಷ್ಟವಾಗಿದೆ. ಆಧುನಿಕ ಜೀವನದ ಪ್ರಗತಿ ಏನೆಲ್ಲಾ ಪ್ರಭಾವ ಬೀರಿದರೂ ಈ ಬುಡಕಟ್ಟು ಸಮುದಾಯವು ತನ್ನದೇ ಆದ ಅಸ್ತಿತ್ವವನ್ನು ಮತ್ತು ಅನನ್ಯತೆಯನ್ನು ಉಳಿಸಿಕೊಂಡು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತಾ ಬಂದಿರುವುದನ್ನು ಕಾಣಬಹುದು. ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ ಮ್ಯಾಸಬೇಡರು ನದಿ ಬಯಲು ಪ್ರದೇಶಗಳಲ್ಲಿ ಹೆಚ್ಚು ವಾಸಿಸುತ್ತಿದ್ದರು. ಬೇಡರು ತಮ್ಮ ಮೂಲ ವೃತ್ತಿಯಾದ ಪಶುಪಾಲನೆಯನ್ನು ಅವಲಂಬಿಸಿದ್ದು, ಅವರು ಒಂದೇ ಪ್ರದೇಶದಲ್ಲಿ ನೆಲೆಸದೆ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು ಅಲ್ಲಿ ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆದುಕೊಳ್ಳುವ ಸಲುವಾಗಿ ದೊಡ್ಡ ಕಳ್ಳೆ ಬೇಲಿಗಳನ್ನು ಸುತ್ತಲೂ ಕಟ್ಟಿಕೊಂಡು ವೃತ್ತಾಕಾರದ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡು ಮತ್ತು ಪಶುಗಳನ್ನು ಕೂಡಲು ರೊಪ್ಪಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಮ್ಯಾಸಬೇಡರ ರೊಪ್ಪಗಳು, ದೇವರೆತ್ತುಗಳು ಮತ್ತು ಕಿಲಾರಿಗಳ ಪರಂಪರೆ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಮ್ಯಾಸಬೇಡ, ಬುಡಕಟ್ಟು ಸಮುದಾಯ, ರೊಪ್ಪಗಳು, ದೇವರೆತ್ತು, ಕಿಲಾರಿ.

### ಪೀಠಿಕೆ

ದೇವರ ಎತ್ತುಗಳ ರೊಪ್ಪಗಳು ಕಾಣಿಸುವ ಕಾಲ ಎಂದರೆ ಶ್ರೀಕೃಷ್ಣ ಪರಮಾತ್ಮ ಬೇಡರಿಗೆ ಹಸುಗಳನ್ನು ಬಳುವಳಿಯಾಗಿ ಕೊಟ್ಟ ನಂತರ ಇವರಲ್ಲಿ ದೇವರ ಎತ್ತುಗಳ ಪರಿಕಲ್ಪನೆ ಮೂಡಿತು. ಈ ದೇವರ ಎತ್ತುಗಳನ್ನು ಮೊದಲು ಪಾಲನೆಮಾಡಿದ ಸಂತತಿ ಎಂದರೆ ಶುಕ್ಲಮಲ್ಲನಾಯಕ. ಆಂಧ್ರಪ್ರದೇಶದ ಶ್ರೀಶೈಲ ಕಡೆಯಿಂದ ತಮ್ಮ ದನಕರುಗಳಿಗೆ ಹುಲ್ಲು ನೀರು ಹುಡುಕುತ್ತಾ ಕರ್ನಾಟಕದ ಕಡೆಗೆ ಬಂದರು. ಆಂಧ್ರದ ಗಡಿ ಭಾಗದಲ್ಲಿ ಹರಿಯುತ್ತಿದ್ದ ಚಿನ್ನಹಗರಿಯ ನದಿಯ ಪಕ್ಕದಲ್ಲಿಯೇ ರೊಪ್ಪಗಳನ್ನು ನಿರ್ಮಿಸಿಕೊಂಡರು. ಸ್ವಲ್ಪ ದಿನಗಳು ಕಳೆದ ನಂತರ ಶುಕ್ಲಮಲ್ಲನಾಯಕನ ಮಕ್ಕಳು ಈ ದೇವರ ಎತ್ತುಗಳನ್ನು ಎರಡು ಭಾಗ ಮಾಡಿಕೊಂಡು. ಒಂದು ರೊಪ್ಪಕ್ಕೆ ಒಣ ಕಳ್ಳೇಯಿಂದ ನಿರ್ಮಿಸಿ ಅದನ್ನು ವಿಷ್ಣು ಕಂಪಳ ಎಂದು ಕರೆದರು,

*Please cite this article as:* ವೀಣಾ, ಕೆ.ಆರ್. (2025). ಮ್ಯಾಸಬೇಡರ ಸಂಸ್ಕೃತಿಯಲ್ಲಿ ರೊಪ್ಪಗಳು, ದೇವರೆತ್ತುಗಳು ಮತ್ತು ಕಿಲಾರಿಗಳ ಪರಂಪರೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 6–21

ಇನ್ನೊಂದು ರೊಪ್ಪವನ್ನು ಹಸಿರು ಕಳ್ಳೆಯಿಂದ ನಿರ್ಮಿಸಿ ಅದನ್ನು ಶಿವಕಂಪಳ ಎಂದು ಕರೆದರು. ಈ ಎರಡು ನೆಲೆಯಲ್ಲಿ ಮ್ಯಾಸ ಬೇಡರಲ್ಲಿರುವ ರೊಪ್ಪಗಳನ್ನು ಗುರುತಿಸಬಹುದು. ಈ ದೇವರೆತ್ತುಗಳನ್ನು ಕಾಯುವುದು ಕಿಲಾರಿಗಳು. ಈ ದೇವರೆತ್ತುಗಳನ್ನು ಪಾಲನೆ ಪೋಷಣೆ ಮಾಡಲು ತಮ್ಮ ಸಮುದಾಯದ ಒಬ್ಬರನ್ನು ಕಿಲಾರಿಯನ್ನಾಗಿ ನೇಮಿಸಿ, ಅವರ ಜವಾಬ್ದಾರಿಗೆ ಈ ದೇವರೆತ್ತುಗಳನ್ನು ಬಿಡುತ್ತಾರೆ. ಅಂದಿನಿಂದ ಕಿಲಾರಿಗಳು ಈ ದೇವರೆತ್ತುಗಳನ್ನು ತಮ್ಮ ಅಧೀನದಲ್ಲಿ ಅವುಗಳ ಪಾಲನೆ ಪೊಷಣೆಯನ್ನು ಮಾಡುತ್ತಾರೆ. ಮ್ಯಾಸಬೇಡರಲ್ಲಿ ಈ ಕಿಲಾರಿ ವೃತ್ತಿ ಬಹಳ ಪವಿತ್ರವಾದ ವೃತ್ತಿಯಾಗಿದೆ. ಇವರು ತಮ್ಮ ಜೀವನವನ್ನು ರೊಪ್ಪದಲ್ಲಿ ದೇವರೆತ್ತುಗಳ ಜೊತೆಯಲ್ಲಿ ಕಳೆಯುತ್ತಾರೆ. ಚಿತ್ರದುರ್ಗ ಮತ್ತು ಬಳ್ಳಾರಿ, ವಿಜಯನಗರ, ದಾವಣಗೆರೆ ಈ ಜಿಲ್ಲೆಗಳಲ್ಲಿ ಪ್ರಮುಖವಾಗಿ ಮ್ಯಾಸಬೇಡರು ಹೆಚ್ಚಾಗಿದ್ದು ಇವರಲ್ಲಿ ಕಿಲಾರಿ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಕಾಣಬಹುದು. ದೇವರೆತ್ತುಗಳನ್ನು ಕಾಯುವ ಅಥವಾ ಸಂರಕ್ಷಿಸುವವನೇ ಕಿಲಾರಿ ಎಂದು ಕರೆಯುತ್ತಾರೆ. ಇವರ ಕೆಲಸ ಪವಿತ್ರವಾದ ವೃತ್ತಿಯಾಗಿ ಕಂಡುಬರುತ್ತದೆ. ಇವರನ್ನು ಸಮುದಾಯದಲ್ಲಿ ಗೌರವದಿಂದ ಕಾಣುತ್ತಾರೆ. ಮ್ಯಾಸಬೇಡರಲ್ಲಿ ಯಾವುದೇ ಹಬ್ಬ, ಜಾತ್ರೆ ಸಂದರ್ಭದಲ್ಲಿ ದೇವರೆತ್ತುಗಳು ಮತ್ತು ಕಿಲಾರಿಗಳು ಅತ್ಯಂತ ಪ್ರಮುಖವಾಗಿ ಕಂಡುಬರುತ್ತಾರೆ.

**ಮ್ಯಾಸಬೇಡರಲ್ಲಿ ರೊಪ್ಪದ ಮಹತ್ವ**

ಮ್ಯಾಸಬೇಡರಲ್ಲಿ ದೇವರ ಎತ್ತಿನ ಗೂಡುಗಳಿಗೆ ರೊಪ್ಪ ಎಂದು ಕರೆಯುತ್ತಾರೆ. ಬಯಲು ಸೀಮೆಯ ಪ್ರದೇಶದಲ್ಲಿ ರೊಪ್ಪಗಳಿಗೆ ಹಟ್ಟಿ, ದೊಡ್ಡಿ ಎಂತಲೂ ಕರೆಯುತ್ತಾರೆ. ಅಲೆಮಾರಿ ಪಶುಪಾಲಕರಾದ ಮ್ಯಾಸಬೇಡರು ದನಗಳ ಮೇವು, ನೀರಿಗಾಗಿ ಬೇರೆ ಪ್ರದೇಶಗಳಿಗೆ ಹೋಗಿ ಅಲ್ಲಿ ಅವುಗಳಿಗೆ ರಕ್ಷಣೆ ನೀಡುವ ಸಲುವಾಗಿ ಸುತ್ತ ಗೂಡು ಕಟ್ಟಿಕೊಂಡು ನೆಲೆಸುತ್ತಿದ್ದರು. ಪ್ರಸ್ತುತ ದಿನಮಾನದಲ್ಲಿಯೂ ಸಹ ಮ್ಯಾಸಬೇಡರು ತಮ್ಮ ಹಟ್ಟಿಗಳಿಗೆ ಹತ್ತಿರದಲ್ಲಿ ದೇವರ ಎತ್ತಿನ ಗೂಡು ಅಥವಾ ರೊಪ್ಪಗಳನ್ನು ಕಟ್ಟಿಕೊಂಡಿರುವುದನ್ನು ಕಾಣಬಹುದು. ಈ ಗೂಡುಗಳಲ್ಲಿರುವ ಎತ್ತುಗಳನ್ನು ಧಾರ್ಮಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಭಯ, ಭಕ್ತಿ, ಪೂಜ್ಯತಾ ಭಾವನೆಯಿಂದ ನಡೆದುಕೊಳ್ಳುತ್ತಾರೆ. ರೊಪ್ಪಗಳೇ ಈ ಸಮುದಾಯಕ್ಕೆ ಮಹತ್ವದ ದೇವಸ್ಥಾನಗಳು ಇದ್ದಂತೆ. ಹೀಗಾಗಿ ದೈವಗಳು ಮತ್ತು ದೇವರೆತ್ತುಗಳು ಇವರ ಬದುಕಿಗೆ ಹತ್ತಿರವಾದಂತಹವುಗಳಾಗಿವೆ. ರೊಪ್ಪಗಳನ್ನು ಇವರು ಮುತ್ತೈಗಳನಿಧಿ, ದೇವರೆತ್ತುಗಳ ಗೂಡುಗಳು, ಎಂದು ಕರೆದು ವಿಶಿಷ್ಟ ಸಂಪ್ರದಾಯಗಳನ್ನು ಇಲ್ಲಿ ಕೈಗೊಳ್ಳುತ್ತಾರೆ.

ಮ್ಯಾಸಬೇಡರು ಕಾಡು ಮೇಡು ಬೆಟ್ಟ ಗುಡ್ಡಗಳಲ್ಲಿ ಪಶುಪಾಲನೆ ಮಾಡುತ್ತ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಜೀವನ ಸಾಗಿಸುತ್ತಿದ್ದ ಸಂದರ್ಭದಲ್ಲಿ. ತಮ್ಮ ಪಶುಗಳನ್ನು ರಕ್ಷಣೆ ಮಾಡಲು ರೊಪ್ಪಗಳನ್ನು ನಿರ್ಮಿಸಿಕೊಳ್ಳುವ ಪರಿಕಲ್ಪನೆ ಬಂದಿತು. ಅಂದಿನಿಂದ ರೊಪ್ಪಗಳಲ್ಲಿಯೇ ದನಗಳನ್ನು ಕೂಡುತ್ತಿದ್ದರು. ಈ ರೊಪ್ಪಗಳ ಸ್ವರೂಪವೇ ಆದಿಮ ಸಂಸ್ಕೃತಿಯನ್ನು ತಿಳಿಸುವಂತಹದ್ದು. ಇಂತಹ ರೊಪ್ಪಗಳನ್ನು ನಿರ್ಮಿಸಲು ಕಾಡಿನಲ್ಲಿಯೇ ಸಿಗುವ ಸೊಪ್ಪು, ಕಳ್ಳೆಯನ್ನು ತಂದು ವೃತ್ತಕಾರವಾಗಿ ರೊಪ್ಪಗಳನ್ನು ನಿರ್ಮಿಸಿಕೊಂಡು ಅದರೊಳಗಡೆ ಹೋಗಲು ಒಂದು ಸಣ್ಣ ಬಾಗಿಲನ್ನು ತೆರೆದಿರುತ್ತಾರೆ. ರೊಪ್ಪದ ಒಳಗಡೆ ಉದಿಪದಿ ಮತ್ತು ಒಡಪು ಕಾಣಬಹುದು. ರೊಪ್ಪದ ಬಾಗಿಲ ಬಳಿಯೇ ಸಣ್ಣ ಗೂಡು

ಇರುತ್ತದೆ. ಅದು ಕರುಗಳ ರೊಪ್ಪ, ಅದರ ಪಕ್ಕದಲ್ಲಿಯೇ ಸೊಪ್ಪಿನಿಂದ ನಿರ್ಮಿಸಿದ ಮತ್ತೊಂದು ಗೂಡು ಇರುತ್ತದೆ. ಅದರಲ್ಲಿ ಕಿಲಾರಿಗಳ ಪೂಜೆಗೆ ಬಳಸುವ ಪರಿಕರಗಳು ಇರುತ್ತವೆ. ಹೀಗೆ ರೊಪ್ಪದ ಮುಂಭಾಗದಲ್ಲಿ ಕಿಲಾರಿಗಳು ಅಡುಗೆ ಮಾಡಿಕೊಳ್ಳಲು ಒಂದು ಗುಬ್ಬದ ಗುಡಿಸಲನ್ನು ನಿರ್ಮಿಸಿಕೊಂಡಿರುತ್ತಾರೆ. ರೊಪ್ಪಗಳು ಮತ್ತು ಗುಬ್ಬದ ಗುಡಿಗಳು ವೃತ್ತಕಾರದ ಸ್ವರೂಪದಲ್ಲಿಯೇ ಇರುತ್ತವೆ.

ಪಶುಗಳ ವಾಸಕ್ಕೆ ನಿರ್ಮಿಸಿರುವ ವಸತಿಗಳಲ್ಲಿ ಹಲವು ಬಗೆಗಳಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ದೇವರ ಎತ್ತುಗಳನ್ನು ಕೂಡಲು ಊರಿನ ಹೊರಗೆ ಅರಣ್ಯದ ಅಂಚಿಗೆ ಅಥವಾ ಹೊಲದ ಸಮೀಪದಲ್ಲಿ ನೀರು ಸಿಗುವಂತಹ ಸ್ಥಳದಲ್ಲಿ ವಿಶಾಲವಾದ ಪ್ರದೇಶದಲ್ಲಿ ರೊಪ್ಪವನ್ನು ನಿರ್ಮಾಣ ಮಾಡುವುದುಂಟು. ಎತ್ತರದ ದಿಬ್ಬಗಳಲ್ಲಿ ನೀರು ನಿಲ್ಲದ, ವಿಶಾಲವಾದ ಸ್ಥಳಾವಕಾಶ ಇರುವ ಕಡೆ ಈ ರೊಪ್ಪಗಳನ್ನು ನಿರ್ಮಿಸುತ್ತಾರೆ. ತಮ್ಮ ದನಗಳ ಸಂಖ್ಯೆಗೆ ಅನುಗುಣವಾಗಿ ಸ್ಥಳವನ್ನು ನಿಗದಿ ಮಾಡಿಕೊಂಡು ಅದರ ಸುತ್ತಲೂ ವಿವಿಧ ರೀತಿಯ ಮುಳ್ಳು ಕಳ್ಳೇಗಳಿಂದ ಬೇಲಿ ಹಾಕಿ ನಿರ್ಮಿಸುವರು. ಈ ಭಾಗದಲ್ಲಿ ಹೆಚ್ಚಾಗಿ ಜಾಲಿ ಕಳ್ಳೆ ದೊರೆಯುವುದರಿಂದ ಅದನ್ನೇ ದೊಡ್ಡಿಗೆ ಬಳಸುತ್ತಾರೆ, ಹೊರಗಿನ ಭಾಗಕ್ಕೆ ಬಾರೆ ಕಳ್ಳೆ ಸಿಕ್ಕರೆ ಅದನ್ನೂ ಬಳಸುತ್ತಾರೆ. ಇತ್ತೀಚೀನ ದಿನಗಳಲ್ಲಿ ಬಳ್ಳಾರಿ ಜಾಲಿ ಹೆಚ್ಚು ಸಿಗುವುದರಿಂದ ಇದನ್ನೇ ಹೆಚ್ಚಾಗಿ ಬಳಸುತ್ತಾರೆ. ರೊಪ್ಪಗಳಲ್ಲಿ ಎರಡು ರೀತಿಯ ಆಕಾರಗಳನ್ನು ನೋಡಬಹುದು. ಅವುಗಳು ಈ ರೀತಿಯಲ್ಲಿವೆ.

**ಚೌಕಾಕಾರದ ರೊಪ್ಪಗಳು**

ರೊಪ್ಪಗಳನ್ನು ವಿಶೇಷ ಎಂಬಂತೆ ನಾಲ್ಕು ಮೂಲೆಗಳನ್ನು ಹೊಂದಿರುವ ಚೌಕಾಕಾರದಲ್ಲಿ ನಿರ್ಮಿಸುತ್ತಾರೆ. ಈ ನಾಲ್ಕು ಮೂಲೆ ಹೊಂದಿರುವ ರೊಪ್ಪ ನಲಗೇತನಹಟ್ಟಿಯಲ್ಲಿನ ಚನ್ನಕೇಶವ ದೇವರ ಎತ್ತುಗಳ ರೊಪ್ಪವನ್ನು ಕಾಂಕ್ರೀಟಿನಿಂದ ನಾಲ್ಕು ಮೂಲೆಯ ಚೌಕಕಾರದಲ್ಲಿ ನಿರ್ಮಿಸಿದ್ದು, ಅದರ ಎಡ ಮತ್ತು ಬಲ ಭಾಗದಲ್ಲಿ ಸಿಮೆಂಟ್ ಶೀಟ್‌ಗಳನ್ನು ಅಳವಡಿಸಿ ಮಳೆ ಬಂದರೂ ದನಗಳು ನೆನೆಯದಂತೆ ಮಾಡಿದ್ದಾರೆ. ಇದು ಪರಂಪರೆಯ ರೊಪ್ಪಗಳಿಗಿಂತ ಭಿನ್ನವಾಗಿರುವುದು ಈ ರೊಪ್ಪಗಳಿಂದ ತಿಳಿದು ಬರುತ್ತದೆ. ಇನ್ನು ನನ್ನಿವಾಳ ಭಾಗದಲ್ಲಿ ಪದಿ ಮುತ್ತೈಗಳ ದೈವಗಳ ದೇವರೆತ್ತುಗಳ ರೊಪ್ಪಗಳನ್ನು ಸಹ ಚೌಕಾಕಾರದಲ್ಲಿ ನಿರ್ಮಿಸಿದ್ದು, ಬಂಗಾರು ದೇವರ ದೇವರೆತ್ತುಗಳ ರೊಪ್ಪವನ್ನು ಮಾತ್ರ ವೃತ್ತಾಕಾರದಲ್ಲಿ ನಿರ್ಮಿಸಿರುವುದು ತಿಳಿದುಬರುತ್ತದೆ.

**ವೃತ್ತಾಕಾರದ ರೊಪ್ಪಗಳು**

ರೊಪ್ಪಗಳ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದಿರುವ ರೊಪ್ಪದ ವಿನ್ಯಾಸವೇ ವೃತ್ತಾಕಾರದ ರೊಪ್ಪ. ಈ ರೊಪ್ಪವು ಹೆಚ್ಚಾಗಿ ಕಳ್ಳೇ ಬೇಲಿ ಅಥವಾ ಪಾರಿಬೇಲಿಯಿಂದ ಕೂಡಿರುತ್ತದೆ. ಈ ವೃತ್ತಾಕಾರದ ರೊಪ್ಪದಲ್ಲಿ ಎರಡು ಭಾಗಗಳು ಇರುತ್ತವೆ. ಒಂದು ದನಗಳ ರೊಪ್ಪವಾದರೆ ಇನ್ನೊಂದು ಕರುಗಳನ್ನು ಕೂಡಲು ನಿರ್ಮಿಸಿರುವ ಪಯಲು ಗೂಡು (ಮರಿಗಳ ಗೂಡು) ಎಂದು ಕರೆಯುತ್ತಾರೆ. ಇದನ್ನು ರೊಪ್ಪದ ಬಾಗಿಲ ಮುಂಭಾಗದಲ್ಲಿ ನಿರ್ಮಿಸಿರುತ್ತಾರೆ. ಈ ಗೂಡಿನಲ್ಲಿರುವ ಕರುಗಳಿಗೆ ಬಿಸಿಲಾಗದಿರಲು ಎಂದು ಒಂದು ಚಪ್ಪರವನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಇಂದು ವೃತ್ತಾಕಾರದ

ರೊಪ್ಪಗಳು ಕಾಂಕ್ರೀಟ್ ನಿಂದ ನಿರ್ಮಾಣವಾಗಿವೆ. ಬಿ.ಜಿ.ಕೆರೆ ಕಮರದ ಕಾವಲಿನಲ್ಲಿರುವ ಶ್ರೀಶೈಲ ಮಲ್ಲಿಕಾರ್ಜುನ ದೇವರೆತ್ತುಗಳ ರೊಪ್ಪವು ಸುತ್ತಲು ಕಾಂಕ್ರಿಟ್‌ನಿಂದ ನಿರ್ಮಿಸಿದ್ದು, ಮೇಲೊದಿಕೆಯಾಗಿ ಕಾಂಕ್ರಿಟಿನ ಆರ್‌ಸಿಸಿಯನ್ನು ಹಾಕಿರುವುದು ಕಂಡುಬರುತ್ತದೆ. ಅಪರೂಪವೆಂಬಂತೆ ಯುಗಾದಿ, ಶ್ರಾವಣ ಮಾಸಗಳಲ್ಲಿ ರೊಪ್ಪದ ಪಕ್ಕದಲ್ಲಿಯೇ ಇರುವ ಬಯಲಿನಲ್ಲಿ ಒಂದು ಹೊಸ ರೊಪ್ಪವನ್ನು ನಿರ್ಮಿಸಿಕೊಂಡು ತಮ್ಮ ಪಾರಿಬೇಲಿಯ ಪರಂಪರೆಯನ್ನು ಮುಂದಿನ ತಲೆಮಾರಿಗೆ ತಿಳಿಸುವ ಉದ್ದೇಶದಿಂದ ವಿಶೇಷ ಮಾಸಗಳಲ್ಲಿ ಈ ರೊಪ್ಪದಲ್ಲಿ ದನಗಳನ್ನು ಕೂಡುವುದನ್ನು ಮತ್ತು ಭಕ್ತರು ಬಂದಾಗ ಅಲ್ಲಿಯೇ ಪೂಜೆ ಮಾಡುವುದನ್ನು ಕಾಣಬಹುದಾಗಿದೆ.

**ರೊಪ್ಪಗಳಿಗೆ ದೇವರೆತ್ತುಗಳನ್ನು ಬಿಡುವ ಪದ್ಧತಿ**

ಮ್ಯಾಸಬೇಡರಲ್ಲಿ ದೇವರೆತ್ತುಗಳನ್ನು ದೈವದ ಸ್ವರೂಪದಿಂದ ಕಾಣುತ್ತಾರೆ. ಈ ಸಮುದಾಯದಲ್ಲಿ ಭಕ್ತರು ಏನೇ ಕಷ್ಟ ಬಂದರೂ ತಮ್ಮ ದೇವರುಗಳಾದ ಸಾಂಸ್ಕೃತಿಕ ನಾಯಕರಿಗೆ ಎತ್ತು ಅಥವಾ ಹಸುವನ್ನು ಬಿಡುವುದಾಗಿ ಹರಿಕೆ ಕಟ್ಟಿಕೊಳ್ಳುತ್ತಾರೆ. ಕಷ್ಟ ಪರಿಹಾರ ಆದ ನಂತರ ದೇವರೆತ್ತುಗಳ ರೊಪ್ಪಕ್ಕೆ ಹೋಗಿ ಎತ್ತುಗಳನ್ನು ಬಿಡುತ್ತಾರೆ. ಇಲ್ಲಿ ಮುಖ್ಯವಾಗಿ ರೊಪ್ಪಗಳಿಗೆ ದೇವರೆತ್ತುಗಳನ್ನು ಬಿಡುವ ಪದ್ಧತಿಯಲ್ಲಿ ಎರಡು ವಿಧಗಳನ್ನು ಗಮನಿಸಬಹುದು. ಒಂದು ತಮ್ಮ ಹೊಲಗಳಿಗೆ ದೇವರೆತ್ತುಗಳನ್ನು ಕರೆಸಿಕೊಂಡು, ಒಂದು ರಾತ್ರಿ ಹೊಲದಲ್ಲಿಯೇ ರೊಪ್ಪವನ್ನು ಕಟ್ಟಿ ರಾತ್ರಿಯೆಲ್ಲಾ ಪೂಜೆ ಕಾರ್ಯಗಳನ್ನು ಮಾಡಿ ಬಿಡುವ ಪದ್ಧತಿ. ಇನ್ನೊಂದು ವಿಧಾನವೆಂದರೆ ಇವರೇ ದೇವರೆತ್ತುಗಳ ರೊಪ್ಪಗಳಿಗೆ ಭೇಟಿ ಕೊಟ್ಟು ದೇವರೆತ್ತು ಬಿಡುವುದು ಇನ್ನೊಂದು ವಿಧಾನವಾಗಿದೆ. ದೇವರೆತ್ತುಗಳನ್ನು ಬಿಡಲು ಎರಡು ವಿಶೇಷತೆಗಳಿರುತ್ತವೆ. ಒಂದು ತಮ್ಮ ಮನೆಯಲ್ಲಿ ತೊಂದರೆಯಾದರೆ ದೇವರೆತ್ತುಗಳಿಗೆ ಕೈ ಮುಗಿದು ನಮ್ಮ ಸಮಸ್ಯೆಯನ್ನು ಪರಿಹರಿಸಿದರೆ ದೇವರೆತ್ತುಗಳಿಗೆ ಎತ್ತನ್ನು ಬಿಡುತ್ತೇವೆಂದು ಹರಕೆ ಕಟ್ಟಿಕೊಳ್ಳುತ್ತಾರೆ. ಇನ್ನೊಂದು ಮಕ್ಕಳಿಲ್ಲದವರಿಗೆ ಮಕ್ಕಳ ವರವನ್ನು ಕರುಣಿಸಿದರೆ ಆ ಮಗುವನ್ನು ಕೂದಲು ತೆಗೆಸುವಾಗ ಹೊಸದಾಗಿ ದೇವರೆತ್ತನ್ನು ಬಿಡುವುದಾಗಿ ಹರಕೆ ಕಟ್ಟಿಕೊಳ್ಳುತ್ತಾರೆ. ಈ ಎರಡು ನೆಲೆಯಲ್ಲಿ ಹರಕೆ ಕಟ್ಟಿಕೊಂಡು ದೇವರೆತ್ತುಗಳನ್ನು ಬಿಡುವ ವಿಧಾನವನ್ನು ಕಾಣಬಹುದು. ಹೀಗೆ ಹರಕೆ ಕಟ್ಟಿಕೊಂಡವರು ರೊಪ್ಪದ ಬಳಿ ದೇವರೆತ್ತುಗಳನ್ನು ನಿಲ್ಲಿಸಿ ಮೊದಲು ಒಡಪನ್ನು ಹಾಕಿ ನಂತರ ಕಿಲಾರಿಯು ದೇವರೆತ್ತುಗಳ ಒಣ ಸಗಣಿಯಿಂದಲೇ ಹೊಸದಾಗಿ ಬಿಡುವ ದೇವರೆತ್ತಿಗೆ ಮುದ್ರೆಯನ್ನು ಹಾಕಲು ಕಬ್ಬಿಣದ ಮುದ್ರೆ ಕೋಲುಗಳನ್ನು ಕಾಯಿಸಿ ಅವು ಕಾಯುತ್ತಿದ್ದಂತೆ ಒಂದು ಕಡೆಯಲ್ಲಿ ಕಂಬಳಿಯ ಗದ್ದುಗೆಯನ್ನು ಹಾಸುತ್ತಾರೆ. ಅದರ ಮೇಲೆ ಅಕ್ಕಿ, ಬಾಳೆ, ಹಣ್ಣು, ವೀಳ್ಯೆದೆಲೆ, ಅಡಿಕೆಯನ್ನು ಇಟ್ಟು ಕಾಸು ಮೀಸಲನ್ನು ಇಟ್ಟು ಬಂದಂತಹ ಕುಲ ಸಾವಿರದವರ ಸಮ್ಮುಖದಲ್ಲಿ ಸೂರ್ಯ ಚಂದ್ರನಿಗೆ ಕೈ ಮುಗಿದು ದೇವರೆತ್ತಿಗೆ ಮುದ್ರೆಯನ್ನು ಹಾಕುತ್ತಾರೆ. ಒಂಭತ್ತು ಜನ ಕಿಲಾರಿಗಳಿಗೆ ಹೊಸದಾಗಿ ತಂದಿರುವ ಶಾಲ್ಯವನ್ನು ಹಾಕುತ್ತಾರೆ. ದೇವರೆತ್ತುಗಳಿಗೆ ಒಂದು ಕುರಿಯನ್ನು ವಾಸ್ಯೆ ಕೊಯ್ದು, ಅದರಿಂದ ಅಡುಗೆಯನ್ನು ತಯಾರಿಸಿ ಬಂದಿರುವ ಭಕ್ತರೆಲ್ಲರೂ ಸಹಪಂಕ್ತಿ ಭೋಜನವನ್ನು ಮಾಡಿ ಕೊನೆಗೆ ದೇವರೆತ್ತುಗಳ ಗೂಡಿನ ಹತ್ತಿರ ಕರಿ ಕಂಬಳಿಯ ಗದ್ದುಗೆಯ ಮೇಲೆ ಕಾಸನ್ನು ಇಟ್ಟು

ನೆಂಟರು–ಬಂಟರು ಕೂಡಿ ಸೂರ್ಯನಿಗೆ ಕೈ ಮುಗಿಯುವುದರ ಮೂಲಕ ದೇವರೆತ್ತುಗಳಿಗೆ ಎತ್ತನ್ನು ಬಿಡುತ್ತಾರೆ. ಅಂದಿನಿಂದ ಆ ಎತ್ತು ದೇವರೆತ್ತು ಆಗಿ ರೊಪ್ಪದಲ್ಲಿ ಇರುತ್ತದೆ.

**ದೇವರೆತ್ತುಗಳಿಗೆ ಹಾಕುವ ಮುದ್ರೆಗಳು**

ಮ್ಯಾಸಬೇಡ ಸಮುದಾಯದಲ್ಲಿ ಭಕ್ತರಿಗೆ ಏನಾದರೂ ಕಷ್ಟ ಬಂದ ಸಮಯದಲ್ಲಿ ಮುತ್ತೈಗಳ ರೊಪ್ಪಕ್ಕೆ ಒಂದು ಆಕಳನ್ನು ಬಿಡುತ್ತೇವೆ ಎಂದು ಹರಕೆ ಕಟ್ಟಿಕೊಳ್ಳುತ್ತಾರೆ. ಹೀಗೆ ಹರಕೆ ಕಟ್ಟಿಕೊಂಡ ಭಕ್ತರು ಬಿಡುವ ಎತ್ತುಗಳನ್ನು ಕಿಲಾರಿಗಳ ಹತ್ತಿರ ಇರುವ ಮುದ್ರೆ ಕೋಲುಗಳಿಂದ ತ್ರಿಶೂಲ, ಬಿಲ್ಲು, ಬಾಣ, ಸೂರ್ಯ, ಚಂದ್ರ, ಲಿಂಗ ಆಕಾರದ ಮುದ್ರೆಗಳನ್ನು ಹಾಕುತ್ತಾರೆ. ಇವುಗಳಲ್ಲಿ ಸಾಮಾನ್ಯವಾಗಿ ಸೂರ್ಯ ಚಂದ್ರನ ಮುದ್ರೆಗಳನ್ನು ಎಲ್ಲಾ ಎತ್ತುಗಳಿಗೂ ಹಾಗೂ ಆಕಳುಗಳಿಗೂ ಹಾಕುತ್ತಾರೆ. ಆದರೆ ಬಿಲ್ಲು ಬಾಣ ತ್ರಿಶೂಲ ಈ ಮುದ್ರೆಗಳನ್ನು ಕೆಲವು ಬೆಡಗುಗಳ ಆಧಾರದ ಮೇಲೆ ಹಾಕುವುದು ವಿಶೇಶವಾಗಿ ಕಂಡುಬರುತ್ತದೆ.

**ದೇವರೆತ್ತುಗಳಿಗೆ ಮುದ್ರೆ ಹಾಕುವ ವಿಧಾನ**

ದೇವರೆತ್ತುಗಳಿಗೆ ಮುದ್ರೆ ಹಾಕುವುದು ಎಂದರೆ ರೊಪ್ಪದ ಮುಂದೆ ಕುಳ್ಳು(ಕಟ್ಟಿಗೆ ಕಡ್ಡಿಗಳು) ಹಾಕಿ ಬೆಂಕಿ ಹಚ್ಚಿ, ಅದರಲ್ಲಿ ಮುದ್ರೆ ಕೋಲುಗಳನ್ನು ಇಟ್ಟು ಚೆನ್ನಾಗಿ ಕಾಯಿಸುತ್ತಾರೆ. ಮುದ್ರೆ ಹಾಕುವ ಎತ್ತನ್ನು ಕಾಲುರಿ ಹಾಕಿ ಕೆಡವಿ ಕಾಲು ಕಟ್ಟಿಕೊಂಡು ನಾಲ್ಕೈದು ಜನ ಹಿಡಿದುಕೊಂಡಿರುತ್ತಾರೆ. ಕಿಲಾರಿ ಕಾದಂತಹ ಮುದ್ರೆ ಕೋಲನ್ನು ಕೈಯಲ್ಲಿ ತೆಗೆದುಕೊಂಡು ಎತ್ತುಗಳ ಹಿಂದಿನ ಕಾಲುಗಳ ತೊಡೆಯ ಮೇಲೆ ಕಾದ ಮುದ್ರೆಯನ್ನು ಹಾಕುತ್ತಾನೆ. ಹೀಗೆ ಮುದ್ರೆ ಹಾಕಿದಾಗ ಆ ಜಾಗ ಎಲ್ಲಾ ಸುಟ್ಟಿರುತ್ತದೆ. ಹೀಗೆ ಸುಟ್ಟ ಕರಕನ್ನು ಗಿಡ ಹಾಗೂ ಮಜ್ಜಿಗೆಯನ್ನು ಕಲಸಿದ ಮಗೆಯಲ್ಲಿ (ಮಣ್ಣಿನ ಮಡಿಕೆ) ಬೀಳಿಸಿಕೊಳ್ಳುತ್ತಾರೆ. ಗಿಡ ಮಜ್ಜಿಗೆ ಕಲಸಿದ ರಸವನ್ನು ಸುಟ್ಟ ಆ ಜಾಗದ ಮೇಲೆ ಹಚ್ಚುತ್ತಾರೆ. ಕಿಲಾರಿಯು ಕಂಬಳಿ ಹೊದ್ದುಕೊಂಡು ಕೈಯಲ್ಲಿ ಸುಟ್ಟ ಕರುಕು ಗಿಡ ಮಜ್ಜಿಗೆಯಿಂದ ಮಾಡಿರುವಂತಹ ಆ ಮಗೆಯನ್ನು ಹಿಡಿದುಕೊಂಡು, ಎತ್ತಿನ ಸುತ್ತ ಮೂರು ಸುತ್ತು ತಿರುಗುತ್ತಾನೆ. ಸವುರು ತಿರುಗುವಾಗ ಅವನನ್ನು ಸುತ್ತಲು ನಿಂತ ಜನರು ಆತನ ಬೆನ್ನಿಗೆ ದಫ್ ದಫ್ ಅಂತ ಹೊಡೆಯುತ್ತಾರೆ. ಈತನು ಹಿಂದಕ್ಕೆ ತಿರುಗಿ ನೋಡುವಂತ್ತಿಲ್ಲ. ಮುಂದೆ ನಡೆದು ಕಿಲಾರಿ ಕೈಯಲ್ಲಿ ಆ ಸವುರನ್ನು ಕೊಡುತ್ತಾನೆ. ಕಿಲಾರಿ ಆ ಸವುರನ್ನು ಮುದ್ರೆ ಹಾಕಿದ ಎತ್ತಿನ ಬಾಯಿಗೆ ಮತ್ತು ಮೂಗಿನೊಳಗೆ ಹಾಕುತ್ತಾನೆ ನಂತರ ಆ ಎತ್ತಿನ ಕೊಂಬುಗಳಿಗೆ ಸವರುತ್ತಾನೆ. ಇದರಿಂದ ಆ ಎತ್ತನ್ನು ದೇವರೆತ್ತಾಗಿ ರೊಪ್ಪದಲ್ಲಿ ಬಿಟ್ಟುಕೊಳ್ಳುತ್ತಾರೆ. ಹೀಗೆ ಎಲ್ಲಾ ರೊಪ್ಪಗಳಲ್ಲೂ ದೇವರೆತ್ತುಗಳಿಗೆ ಮುದ್ರೆ ಹಾಕುವುದು ಕಂಡುಬರುತ್ತದೆ. ಈ ಮುದ್ರೆಯನ್ನು ಹಾಕಿದ ಫಳಿಗೆಯಿಂದ ಅದು ದೇವರೆತ್ತುವಿನ ಸ್ಥಾನವನ್ನು ಪಡೆದುಕೊಂಡು ರೊಪ್ಪದೊಳಗೆ ಸೇರುತ್ತದೆ.

**ದೇವರೆತ್ತುಗಳ ಅಂತ್ಯಸಂಸ್ಕಾರ**

ದೇವರೆತ್ತುಗಳು ಸತ್ತಾಗ ಅವುಗಳನ್ನು ಕಿಲಾರಿಗಳು ಊರಿನಿಂದ ದೂರದ ಅಡವಿಯಲ್ಲಿ ಅವುಗಳಿಗೆ ಪೂಜೆ ಮಾಡಿ ಅಂತ್ಯಸಂಸ್ಕಾರವನ್ನು ಮಾಡುತ್ತಾರೆ. ಈ ಅಂತ್ಯಸಂಸ್ಕಾರವನ್ನು ಒಂದೊಂದು ರೊಪ್ಪದಲ್ಲಿ ಬೇರೆ ಬೇರೆ ವಿಧಾನದಲ್ಲಿ ಮಾಡುತ್ತಾರೆ. ಈ ಸಮುದಾಯದಲ್ಲಿ ದೇವರೆತ್ತುಗಳ ಅಂತ್ಯಸಂಸ್ಕಾರವನ್ನು ಎರಡು ವಿಧದಲ್ಲಿ ಮಾಡುತ್ತಾರೆ. ಅದನ್ನು ಈ ಕೆಳಗಿನಂತೆ ನೋಡಬಹುದು.

**ಹೂಳುವ ಪದ್ಧತಿ**

ರೊಪ್ಪದಲ್ಲಿರುವ ದೇವರೆತ್ತು ಸತ್ತಾಗ ವಿಷಯ ತಿಳಿದ ಕಿಲಾರಿಗಳು ಹಟ್ಟಿಯ ಪಕ್ಕದಲ್ಲಿ ಅಡವಿಯಲ್ಲಿ ಒಂದು ಕುಣಿಯನ್ನು ತೆಗೆದು ಅದರಲ್ಲಿ ದೇವರೆತ್ತನ್ನು ಪೂರ್ವದಿಕ್ಕಿಗೆ ಮುಖಮಾಡಿ ಮಲಗಿಸುತ್ತಾರೆ. ಅದಕ್ಕೆ ಪೂಜೆ ಮಾಡಿ ಅದರ ಮೇಲೆ ಕಿಲಾರಿಗಳು ತಂಗಡಿ ಗಿಡದ ಸೊಪ್ಪಿನ್ನು ಹಾಕಿ ಮುಚ್ಚುತ್ತಾರೆ. ನಂತರ ಅದರ ಮೇಲೆ ಮಣ್ಣನ್ನು ಹಾಕಿ ಕುಣಿಯನ್ನು ಮುಚ್ಚುತ್ತಾರೆ. ಈ ದೇವರೆತ್ತುಗೆ ಮಣ್ಣು ಮಾಡುವಂತಹ ಸಂದರ್ಭದಲ್ಲಿ ದೇವರೆತ್ತಿನ ಎರಡು ಕೊಂಬುಗಳನ್ನು ಮೇಲೆ ಕಾಣುವಂತೆ ಬಿಟ್ಟು ಮಣ್ಣು ಮುಚ್ಚಿರುತ್ತಾರೆ. ಈ ಕೊಂಬುಗಳನ್ನು ಬಸವನ ಕೊಂಬುಗಳು ಎಂದು ಪೂಜೆ ಮಾಡುತ್ತಾರೆ. ನಂತರ ಕಲ್ಲುಗಳಿಂದ ಕಟ್ಟೆಯನ್ನು ಕಟ್ಟುತ್ತಾರೆ ಇದನ್ನು ಬಸವನ ಕಟ್ಟೆ ಅಥವಾ ಬಸವನ ಸಮಾಧಿ ಎಂದು ಕರೆಯುತ್ತಾರೆ. ಯುಗಾದಿ ಮತ್ತು ದಸರಾ ಹಬ್ಬದಲ್ಲಿ ಹಿರಿಯರ ಹಬ್ಬ ಮಾಡುವಾಗ ಈ ಸ್ಥಳಕ್ಕೆ ಹೋಗಿ ಪೂಜೆ ಮಾಡಿಕೊಂಡು ನಂತರ ಮನೆಯಲ್ಲಿ ಹಿರಿಯರ ಹಬ್ಬವನ್ನು ಮಾಡುತ್ತಾರೆ.

**ಕಲ್ಲು ಬಣವೆ**

ಇನ್ನೂ ಕೆಲವು ರೊಪ್ಪಗಳಲ್ಲಿ ದೇವರೆತ್ತುಗಳು ಸತ್ತಾಗ ಮಣ್ಣಲ್ಲಿ ಹೂಳುವುದನ್ನು ಬಿಟ್ಟು ಪ್ರಾಚೀನ ನಾಗರೀಕ ಇತಿಹಾಸವನ್ನು ಹೊಂದಿರುವ ಈ ಕಲ್ಲು ಬಣವೆ ಪದ್ಧತಿಯನ್ನು ಮ್ಯಾಸಬೇಡ ಸಮುದಾಯದಲ್ಲಿ ಆಚರಣೆ ಮಾಡುವುದನ್ನು ನೋಡಬಹುದು. ಕಲ್ಲು ಬಣವೆ ಎಂದರೆ ಸತ್ತ ಹಸುವನ್ನು ಅದರ ದೇಹವನ್ನು ಕಾಣದಂತೆ ಕಲ್ಲುಗಳಿಂದ ಗುಡ್ಡೆಯನ್ನು ಹಾಕಿ ಕಟ್ಟೆಯನ್ನು ನಿರ್ಮಿಸುವುದೇ ಕಲ್ಲು ಬಣವೆಯೆಂದು ಕರೆಯುತ್ತೇವೆ. ಇದನ್ನು ಕೂಡ "ಬಸವನ ಕಟ್ಟೆ" "ಮಲೈ ಎದ್ಲುಕಟ್ಟ" ಎಂದು ಕರೆಯುತ್ತಾರೆ.

**ದೇವರೆತ್ತುಗಳಲ್ಲಿ ಜೆನ್ನಿಗೆ ಆಕಳಿನ ಮಹತ್ವ**

ಮ್ಯಾಸಬೇಡ ಸಮುದಾಯದಲ್ಲಿ ದೇವರೆತ್ತುಗಳಲ್ಲಿ ಜೆನ್ನಿಗೆ ಆಕಳು ವಿಶೇಷವಾಗಿ ಕಂಡುಬರುತ್ತದೆ. ದೇವರಿಗೆ ಅರ್ಪಿಸುವ ತುಪ್ಪವನ್ನು ತಯಾರಿಸಲು ಬೇಕಾಗುವ ಹಾಲಿಗಾಗಿ ದೇವರೆತ್ತುಗಳಲ್ಲಿ ಆರಿಸಿ ಒಂದು ಆಕಳನ್ನು ಬಿಟ್ಟಿರುತ್ತಾರೆ. ಅದನ್ನೆ ಜೆನ್ನಿಗೆ ಆಕಳು ಎಂದು ಕರೆಯುತ್ತಾರೆ. ಜೆನ್ನಿಗೆ ಆಕಳಿನ ಹೆಸರಿನಲ್ಲಿಯೇ ಜೆನ್ನಿಗೆ ಹಳ್ಳ ಎಂಬ ಹಳ್ಳ ಇರುವುದನ್ನು ಇಲ್ಲಿ ಕಾಣಬಹುದು. ಇದು ಕಂಪಳ ದೇವರಹಟ್ಟಿಯ ಹತ್ತಿರ ಹರಿಯುವ ಚಿನ್ನಗರಿ ನದಿಯನ್ನು ಇನ್ನೊಂದು ಹೆಸರಿನಿಂದ ಜೆನ್ನಿಗೆ ಹಳ್ಳ ಎಂದು ಕರೆಯುತ್ತಾರೆ. ಈ ಹಳ್ಳವು ವರ್ಷ ಪೂರ್ತಿ ಬತ್ತದೇ ಹರಿಯುವುದರಿಂದ ಜೆನ್ನಿಗೆ ಹಳ್ಳ ಎಂದು ಕರೆಯುತ್ತಾರೆ. ಹೀಗೆ ವರ್ಷವಿಡೀ ಹಾಲು ಕೊಡುವ ಆಕಳನ್ನು ಜೆನ್ನಿಗೆ ಆಕಳು ಎಂದು ಕರೆಯುತ್ತಾರೆ. ಈ ಆಕಳನ್ನು ಮ್ಯಾಸಬೇಡ ಸಮುದಾಯದಲ್ಲಿ ಅತ್ಯಂತ ಪವಿತ್ರ ಸ್ಥಾನವನ್ನು ಕೊಟ್ಟಿದ್ದಾರೆ. ಈ ಸಮುದಾಯದಲ್ಲಿ ಯಾವುದೇ ಹಬ್ಬ, ಆಚರಣೆ ಸಂದರ್ಭಗಳಲ್ಲಿ ದೇವರ ಕಾರ್ಯಗಳಲ್ಲಿ ದೇವರಿಗೆ ನೈವೇದ್ಯ ಮಾಡಲು ಈ ಜೆನ್ನಿಗೆ ಆಕಳಿನ ಹಾಲು ಮತ್ತು ತುಪ್ಪವನ್ನು ಕಿಲಾರಿಗಳು ದೇವರೆತ್ತುಗಳ ಗೂಡಿನಿಂದ ತೆಗೆದುಕೊಂಡು ಬರಿಗಾಲಿನಲ್ಲಿ ನಡೆದುಕೊಂಡು ಹೋಗಿ ದೇವರಿಗೆ ಅರ್ಪಿಸಿದಾಗಲೆ ಹಬ್ಬ, ಜಾತ್ರೆ ಪ್ರಾರಂಭವಾಗುತ್ತದೆ ಮತ್ತು ವಿವಿಧ ಕಾರ್ಯಗಳು ಆರಂಭವಾಗುತ್ತವೆ.

**ರೊಪ್ಪಗಳಲ್ಲಿ ಆಚರಿಸುವ ಆಚರಣೆಗಳು**

ಕರ್ನಾಟಕದ ಅನೇಕ ಬುಡಕಟ್ಟು ಸಂಸ್ಕೃತಿಗಳಲ್ಲಿ ಮ್ಯಾಸಬೇಡರ ಸಂಸ್ಕೃತಿಯು ವಿಶಿಷ್ಟವಾಗಿ ಕಂಡುಬರುತ್ತಿದ್ದು, ಅದರ ಸಂಸ್ಕೃತಿಯೊಳಗಿನ ಅಂತರ್ಯದಲ್ಲಿ ಅನೇಕ ರೋಚಕ ಮತ್ತು ಅರ್ಥಪೂರ್ಣ ಸಂಪ್ರದಾಯ, ಆಚರಣೆಗಳಿವೆ. ಆಧುನಿಕ ಪ್ರಭಾವಗಳು ಏನೆಲ್ಲಾ ಪ್ರಭಾವ ಬೀರಿದರೂ ಈ ಬುಡಕಟ್ಟು ಸಮುದಾಯ ತಮ್ಮದೇ ಆದ ಅಸ್ತಿತ್ವವನ್ನು ಮತ್ತು ಅನನ್ಯತೆಯನ್ನು ಉಳಿಸಿಕೊಂಡು ತಲೆಮಾರಿನಿಂದ ತಲೆಮಾರಿಗೆ ರವಾನಿಸುತ್ತಾ ಬಂದಿರುವುದನ್ನು ಕಾಣಬಹುದು. ಅಂತಹ ಆಚರಣೆಗಳಲ್ಲಿ ಒಂದಾದ ಮ್ಯಾಸಬೇಡರ ರೊಪ್ಪಗಳಲ್ಲಿನ ಆಚರಣೆಗಳು ಒಂದು ವಿಶಿಷ್ಟ ಸಂಪ್ರದಾಯವಾಗಿ ಕಂಡುಬರುತ್ತದೆ.

ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ ಮ್ಯಾಸಬೇಡರು ವಾಸಿಸಲು ಬಹಳಷ್ಟು ಸೂಕ್ತವಾದ ಪ್ರದೇಶಗಳನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು. ಅವುಗಳೆಂದರೆ ಕಣಿವೆ ಪ್ರದೇಶಗಳು ಹಾಗೂ ಬೆಟ್ಟ ಗುಡ್ಡ ದಟ್ಟವಾದ ಕಾಡು, ನದಿಯ ಬಯಲುಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ಮ್ಯಾಸಬೇಡರು ತಮ್ಮ ಮೂಲ ವೃತ್ತಿಯಾದ ಪಶುಪಾಲನೆಯನ್ನು ಅವಲಂಬಿಸಿದ್ದು, ಅವರು ಒಂದೇ ಪ್ರದೇಶದಲ್ಲಿ ನೆಲ ನಿಲ್ಲದೇ ತಮ್ಮ ಪಶುಗಳಿಗೆ ಹುಲ್ಲುಗಾವಲನ್ನು ಮತ್ತು ನದಿಬಯಲುಗಳನ್ನು ಅರಸಿ ಹೋಗುತ್ತಿದ್ದರು. ಇವರು ಕಾಡು ಕೊಳ್ಳಗಳಲ್ಲಿಯೂ ಪರ್ವತಗಳಲ್ಲಿ ವಾಸಿಸುತ್ತಿದ್ದರಿಂದ ಕಾಡು ಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಅವರು ದೊಡ್ಡ ದೊಡ್ಡ ಕಳ್ಳೆ ಬೇಲಿಗಳನ್ನು ಸುತ್ತಲೂ ಕಟ್ಟಿಕೊಂಡು ಅದರೊಳಗೆ ಮನುಷ್ಯರು ವಾಸಿಸಲು ಒಂದು ವೃತ್ತಾಕಾರದ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡು ಅವುಗಳ ಪಕ್ಕದಲ್ಲಿಯೇ ಪಶುಗಳನ್ನು ಕೂಡಲು ರೊಪ್ಪಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಇಂದು ಕಂಡುಬರುವ ಪದ್ಧತಿಯಂತೆ ದೇವರ ಎತ್ತುಗಳಿಗಾಗಿಯೇ ಪ್ರತ್ಯೇಕವಾಗಿ ರೊಪ್ಪಗಳನ್ನು ನಿರ್ಮಿಸಿಕೊಂಡಿರುವುದು ನಮಗೆ ಇಂದಿಗೂ ಕಂಡುಬರುತ್ತದೆ.

**ರೊಪ್ಪದಲ್ಲಿ ದಿನಂಪ್ರತಿ ಆಚರಣೆ**

ಮ್ಯಾಸಬೇಡರು ರೊಪ್ಪವನ್ನು ದೇವರ ಸನ್ನಿಧಿಯಂತೆ ಅತ್ಯಂತ ಪವಿತ್ರವಾದ ಸ್ಥಾನವನ್ನು ನೀಡಿದ್ದಾರೆ. ಈ ರೊಪ್ಪದಲ್ಲಿ ನೆಲೆಸಿರುವ ಕಿಲಾರಿಗಳು ಪ್ರತಿದಿನ ಮುಂಜಾನೆ ಇವರು ರೊಪ್ಪವನ್ನು ಸ್ವಚ್ಛಗೊಳಿಸಿ ಅಂದರೆ ಗೂಡಿನಲ್ಲಿ ದೇವರೆತ್ತುಗಳು ಹಾಕಿರುವ ಸಗಣಿಯನ್ನು ಬಾಚಿ ಒಂದು ಕಡೆ ಹಾಕಿ, ರೊಪ್ಪದಲ್ಲಿರುವ ಒಡಪಗೆ ತಂಗಟಿ ಗಿಡದ ಕಟ್ಟಿಗೆಗಳನ್ನು ಹಾಕಿ ಬೆಂಕಿ ಹಚ್ಚಿ ಒಡಪನ್ನು ಹಾಕುತ್ತಾರೆ. ಈ ಒಡಪಿಗೆ ರೊಪ್ಪದಲ್ಲಿರುವ ಕಿಲಾರಿಗಳೆಲ್ಲಾ ಏಳು ಬಾರಿ ಕೈ ಮುಗಿದು ನಂತರ ರೊಪ್ಪದಲ್ಲಿರುವ ಉದಿ ಪದಿಗೆ ನಮಸ್ಕರಿಸಿ ಸೂರ್ಯನ ಮೊಕ್ಕು ತೀರಿಸುತ್ತಾರೆ. ನಂತರ ಕಿಲಾರಿಗಳು ತಯಾರಿಸಿದ ಪ್ರಸಾದವನ್ನು ಮೊದಲು ದೇವರೆತ್ತುಗಳಿಗೆ ನೀಡಿ, ನಂತರ ರೊಪ್ಪಕ್ಕೆ ಬಂದಿರುವ ಭಕ್ತರು ಪ್ರಸಾದವನ್ನು ಸ್ವೀಕರಿಸಿದ ನಂತರ ಕಿಲಾರಿಗಳು ಸೇವಿಸುತ್ತಾರೆ. ಹೀಗೆ ರೊಪ್ಪದಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆ ಪೂಜೆ ಮಾಡುತ್ತಾರೆ.

**ರೊಪ್ಪದಲ್ಲಿ ಪ್ರತಿ ಸೋಮವಾರ ಆಚರಿಸುವ ಆಚರಣೆ**

ರೊಪ್ಪದಲ್ಲಿ ಪ್ರತಿದಿನ ಮಾಡುವ ರೀತಿಯಲ್ಲಿ ವಾರದ ಪ್ರತಿ ಸೋಮವಾರದಂದು ಪೂಜಾ ಕಾರ್ಯಗಳು ಮಾಡುತ್ತಾರೆ. ಸೋಮವಾರ ಮ್ಯಾಸಬೇಡರಿಗೆ ವಿಶೇಷವಾದ ವಾರ ಆಗಿರುತ್ತದೆ. ಯಾಕೆಂದರೆ

ಸೋಮವಾರವನ್ನು ಈ ಸಮುದಾಯದವರು ತಮ್ಮ ಮನೆದೇವರ ವಾರ ಎಂದು ನಂಬಿದ್ದಾರೆ. ಆದ್ದರಿಂದ ಈ ವಾರದಂದು ಪ್ರತಿದಿನಕ್ಕಿಂತ ಸೋಮವಾರದಂದು ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಈ ಸೋಮವಾರದಂದು ರೊಪ್ಪದಲ್ಲಿ ಕಿಲಾರಿಗಳು ಮುಂಜಾನೆ ಎದ್ದು ಮಡಿ ಮೈಲಿಗೆಯಿಂದ ಎತ್ತಿನ ಗೂಡನ್ನು ಸ್ವಚ್ಛಗೊಳಿಸಿ, ಒಡಪನ್ನು ಹಾಕಿ ಉದಿ ಪದಿಗೆ ಏಳು ಬಾರಿ ಸೂರ್ಯನಿಗೆ ನಮಸ್ಕರಿಸುತ್ತಾರೆ. ರೊಪ್ಪದ ಬಾಗಿಲಿಗೆ ಹೂವುಗಳನ್ನು ಇಟ್ಟು, ಊದುಬತ್ತಿ ಹಚ್ಚಿ ತೆಂಗಿನಕಾಯಿಯನ್ನು ಹೊಡೆಸಿ ಕೈಮುಗಿಯುತ್ತಾರೆ. ನಂತರ ರೊಪ್ಪಕ್ಕೆ ಯಾವುದೇ ರೀತಿಯಾದ ಕೆಟ್ಟ ದೃಷ್ಠಿ ತಾಕಬಾರದೆಂದು ನೀರಿನಲ್ಲಿ ಅನ್ನವನ್ನು ಕಲಸಿ ಈ ನೀರನ್ನು ರೊಪ್ಪದ ಸುತ್ತ ಚೆಲ್ಲುತ್ತಾರೆ.

**ರೊಪ್ಪಗಳಲ್ಲಿ ಚರಗ ಚೆಲ್ಲುವ ಆಚರಣೆ**

ಮ್ಯಾಸನಾಯಕರ ಹಟ್ಟಿಗಳಲ್ಲಿ ಯುಗಾದಿ ಹಬ್ಬ ನಾಲ್ಕು ದಿನಗಳ ಕಾಲ ನಡೆಯುತ್ತದೆ. ಈ ನಾಲ್ಕು ದಿನಗಳಲ್ಲಿ ಮೊದಲನೇ ದಿನವಾದ ಅಮವಾಸ್ಯೆಯ ದಿನ ರಾತ್ರಿ ದೇವರೆತ್ತುಗಳ ರೊಪ್ಪಗಳಲ್ಲಿ ಚರಗ ಚೆಲ್ಲುವ ಆಚರಣೆ ನಡೆಯುತ್ತದೆ. ಈ ದಿನ ಭಕ್ತಾದಿಗಳ ಕೋರಿಕೆಯ ಮೇರೆಗೆ ಯಾವುದಾದರೂ ಒಬ್ಬ ಭಕ್ತನ ಹೊಲಕ್ಕೆ ರೊಪ್ಪವನ್ನು ಸ್ಥಳಾಂತರಿಸುತ್ತಾರೆ. ಇಲ್ಲವೇ ಮೂಲ ರೊಪ್ಪದ ಬಳಿಯೇ ತಾತ್ಕಾಲಿಕವಾಗಿ ರೊಪ್ಪವನ್ನು ನಿರ್ಮಿಸಿ ಕೆಲವು ವಿಶಿಷ್ಟ ಆಚರಣೆಗಳನ್ನು ನಡೆಸಲಾಗುತ್ತದೆ. ಅವುಗಳಲ್ಲಿ ಮುಖ್ಯವಾಗಿ ದೇವರ ಎತ್ತುಗಳ ಗೂಡಿಗೆ ಚರಗ ಚೆಲ್ಲುವುದನ್ನು ಕಾಣಬಹುದು. ಚರಗ ಎಂದರೆ ಕುರಿಮರಿಯ ರಕ್ತ ಮತ್ತು ಅನ್ನ ಇವೆರಡನ್ನು ಕಲಸಿ ರೊಪ್ಪದ ಸುತ್ತ ಚೆಲ್ಲುತ್ತಾರೆ ಇದನ್ನು ಚರಗ ಎನ್ನುತ್ತಾರೆ. ಈ ಚರಗ ಚೆಲ್ಲುವುದಕ್ಕೆ ಕೆಲವು ನಿರ್ದಿಷ್ಟ ಕುಲದವರು ಬೇಟೆಯನ್ನು (ಕುರಿ ಮಾತ್ರ) ನೀಡುತ್ತಾರೆ. ಅದನ್ನು ವಾಸ್ಯೆ ಕೊಯ್ದು ಅದರ ಕರಸು ಅಥವಾ ರಕ್ತ ಮತ್ತು ಪದಿಯಲ್ಲಿ ಇರುವ ಹಣ್ಣು ಕಾಯಿಗಳನ್ನು ಸೇರಿಸಿ ದೇವರ ಎತ್ತುಗಳ ರೊಪ್ಪದ ಸುತ್ತಲೂ ಚರಗ ಚೆಲ್ಲುತ್ತಾರೆ. ಈ ಆಚರಣೆಯ ಹಿನ್ನೆಲೆಯನ್ನು ನೋಡುವುದಾದರೆ ದೇವರೆತ್ತುಗಳನ್ನು ದುಷ್ಟ ಶಕ್ತಿಗಳಿಂದ ದೂರವಿಡಲು ಮತ್ತು ದೇವರೆತ್ತುಗಳಿಗೆ ಯಾವುದೇ ರೋಗರುಜಿನಗಳು ಬರಬಾರದು ಎಂದು ಈ ಆಚರಣೆಯನ್ನು ರೊಪ್ಪಗಳಲ್ಲಿ ಮಾಡುತ್ತಾರೆ.

**ರೊಪ್ಪಗಳಲ್ಲಿ ಉದಿ–ಪದಿ ಒಡಪು ಆಚರಣೆ**

ರೊಪ್ಪಗಳಲ್ಲಿ ಒಡಪು ಮತ್ತು ಉದಿಪದಿಯ ಆಚರಣೆಗಳನ್ನು ನೋಡುವುದಾದರೆ, ದೇವರೆತ್ತುಗಳ ಪ್ರತಿಯೊಂದು ರೊಪ್ಪಗಳಲ್ಲಿ ಒಡಪು ಇರುವುದು ಕಾಣಬಹುದು. ಒಡಪು ಎಂದರೆ ದಿನಾಲು ಬೆಳಿಗ್ಗೆ ಮತ್ತು ಸಾಯಂಕಾಲ ಬೆಂಕಿ ಹಾಕಲು ಮಾಡಿರುವ ಒಂದು ಗುಂಡಿ. ಒಡಪು ಎಂದರೇ ಸಂಕ್ಷಿಪ್ತ ಕನ್ನಡ ನಿಘಂಟಿವಿನ ಪ್ರಕಾರ 'ಒಡೆದಿರುವಿಕೆ' ಅಥವಾ 'ಒಡಕು' ಎಂಬ ಅರ್ಥವನ್ನು ತಿಳಿಸಿದ್ದಾರೆ. ಅಂದರೆ ಒಂದು ಮಣ್ಣಿನ ಮಡಿಕೆಯು ಅರ್ಧಕ್ಕೆ ಒಡೆದಿರುವುದನ್ನು ಬಳಸುತ್ತಾರೆ. ಇದರಿಂದ ಇದನ್ನು ಒಡಪು ಎಂದು ಕರೆದಿರಬಹುದು. ಈ ಒಡಪಿನಲ್ಲಿ ಪ್ರತಿದಿನ ಮುಂಜಾನೆ ಮತ್ತು ಸಂಜೆಯ ವೇಳೆಗೆ ಕಿಲಾರಿಗಳು ತಂಗಟಿ ಗಿಡದ ಹಸಿ ಸೊಪ್ಪು ಮತ್ತು ಬಂದರಕೆಯ ಒಣ ಕಟ್ಟಿಗೆಯಿಂದ ಅಥವಾ ಅಸೀನ ಮರದ ಚಕ್ಕೆಗಳಿಂದ ಬೆಂಕಿ ಹಚ್ಚಿ ಹೊಗೆ ಹಾಕುತ್ತಾರೆ. ಈ ಗುಂಡಿಯನ್ನು ಮುತ್ತಿಗಾರ ಒಡಪು ಎನ್ನುತ್ತಾರೆ. ಕಿಲಾರಿಗಳು ಹೇಳುವ ಪ್ರಕಾರ ಹಿಂದಿನ ಕಾಲದಲ್ಲಿ ಮೇಯಲು ಹೋಗಿರುವ ದನಕರುಗಳಿಗೆ ಮತ್ತು ಕಿಲಾರಿಗೆ ತಮ್ಮ ರೊಪ್ಪಕ್ಕೆ

ಸಂಜೆ ಮರಳಿ ಬರಲು ಸೂಚಕವಾಗಿ ಹೀಗೆ ಹೊಗೆ ಹಾಕಲಾಗುತ್ತಿತ್ತು ಎನ್ನಲಾಗುತ್ತದೆ. ಆ ಹೊಗೆಯನ್ನು ಕಂಡ ಕಿಲಾರಿ, ದೇವರ ಎತ್ತುಗಳು ನೇರವಾಗಿ ರೊಪ್ಪಕ್ಕೆ ಬರುತ್ತಿದ್ದವು ಎನ್ನುತ್ತಾರೆ. (ಮಾಹಿತಿ: ಕಿಲಾರಿ ಪಾಲಯ್ಯ, 35, ಮುತ್ತಿಗಾರಹಳ್ಳಿ,) ಹೀಗೆ ಹೊಗೆ ಹಾಕುವ ಮತ್ತೊಂದು ಉದ್ದೇಶವೆಂದರೆ ರೊಪ್ಪದಲ್ಲಿ ಸೊಳ್ಳೆಗಳು ಇದ್ದರೆ ಈ ಹೊಗೆಯಿಂದ ಸೊಳ್ಳೆಗಳು ಕಡಿಮೆಯಾಗಿ ದನಕರುಗಳು ನೆಮ್ಮದಿಯಾಗಿ ನಿದ್ದೆಮಾಡಲು ಸಾಧ್ಯವಾಗುತ್ತದೆ. ಒಡಪು ಹಾಕುವುದು ಪ್ರತಿದಿನದ ವಾಡಿಕೆ, ಅದರೆಂತೆಯೇ ಶ್ರಾವಣ ಮಾಸದಲ್ಲಿ ಇಲ್ಲಿ ಸಮುದಾಯದವರು ಸೇರಿದಾಗ ಅಂದು ಎಂದಿನಂತೆ ಕಿಲಾರಿ ಮುತ್ತಿಗಾರು ಒಡಪಿನಲ್ಲಿ ಬೆಂಕಿ ಹಾಕುತ್ತಾನೆ ನಂತರ ಸಮುದಾಯದವರು ಎತ್ತುಗಳಿಗೆ ಕೈ ಮುಗಿಯುತ್ತಾರೆ, ಇದನ್ನು ತೆಲುಗಿನಲ್ಲಿ ಸೂರ್ಯನಿಗೆ ಮೊಕ್ಕು ತೀರಿಸಿರುವುದು ಎನ್ನುತ್ತಾರೆ. ಹಾಗೆಯೇ ರೊಪ್ಪದಲ್ಲಿ ಉದಿ ಪದಿ ನಿರ್ಮಿಸಿಕೊಂಡಿರುತ್ತಾರೆ. ಪದಿ ಇರುವ ದಿಕ್ಕು ಪೂರ್ವದ ಕಡೆಯಿಂದ ಒಡಪು ಇರುವ ದಿಕ್ಕು ಪಶ್ಚಿಮದ ಕಡೆಗೆ ನೆಲಕ್ಕೆ ಬಾಗಿ ನಮಸ್ಕಾರಿಸುತ್ತಾ ಹೋಗಿ ಮತ್ತೆ ಪದಿಯ ಕಡೆಗೆ ಬರುತ್ತಾರೆ ಹೀಗೆ ಮೂರು ಬಾರಿ ನಮಸ್ಕರಿಸಿ ಸೂರ್ಯನ ಮೊಕ್ಕುತೀರಿಸಿ ನಂತರ ಪರಸ್ಪರ ಕೈ ಕೈ ಮುಟ್ಟಿಕೊಂಡು ನಮಸ್ಕರಿಸುತ್ತಾರೆ.

**ಕುಲಕೆಟ್ಟವರಿಗೆ ರೊಪ್ಪಗಳಲ್ಲಿ ನೀರಾಕುವ ಆಚರಣೆ**

ಸಮುದಾಯದಲ್ಲಿ ಯಾರಾದರು ಚಪ್ಪಲಿಯಲ್ಲಿ ಹೊಡೆದಾಡಿದರೆ, ಅಸ್ಪೃಶ್ಯರೊಡನೆ ಸಂಬಂಧ ಬೆಳಸಿದರೆ, ಅವರ ಮನೆಯಲ್ಲಿ ಊಟ ಮಾಡಿದರೆ ಮತ್ತು ಬೇರೆ ಜಾತಿಯಲ್ಲಿ ವಿವಾಹವಾದರೆ ಇವರನ್ನು ಕುಲಕೆಟ್ಟವರೆಂದು ಕುಲದಿಂದ ಹೊರಗಿಡುತ್ತಾರೆ. ಇವರಲ್ಲಿ ವಿಶೇಷವಾಗಿ ಚಪ್ಪಲಿಯಲ್ಲಿ ಹೊಡೆದವರು ಮತ್ತು ಹೊಡೆಸಿಕೊಂಡವರು ರೊಪ್ಪಕ್ಕೆ ಬಂದು ನೀರಾಕಿಸಿಕೊಂಡು ಹೋದರೆ ಇವರನ್ನು ಮನೆಗೆ ಹಾಗೂ ಕುಲದೊಳಗೆ ಸೇರಿಸಿಕೊಳ್ಳುತ್ತಾರೆ. ಇವರಿಗೆ ನೀರಾಕುವ ವಿಧಾನವನ್ನು ನೋಡುವುದಾದರೆ ಚಪ್ಪಲಿಯಲ್ಲಿ ಹೊಡೆದವನು ಭತ್ಯೆ–ಬೇಟೆ ದಂಡ ಕೊಡಬೇಕು. ಕೊಟ್ಟ ಭತ್ಯೆಯನ್ನು ಬೇಟೆಯನ್ನು ಊರಿನ ಯಜಮಾನರಿಗೆ ತಿಳಿಸಿ ಗೂಡಿಗೆ ತೆಗೆದುಕೊಂಡು ಬರುತ್ತಾರೆ. ಕಿಲಾರಿ ಅವರು ತಂದ ಧಾನ್ಯಗಳಿಂದ ಅನ್ನ ಮಾಡಿ ರೊಪ್ಪದ ಬಾಗಿಲಿಗೆ ಮೂರು ಎಡೆಗಳನ್ನು ಹಾಕುತ್ತಾನೆ. ನಂತರ ಪೂಜೆಮಾಡಿ ಯಜಮಾನನಿಗೆ ವೀಳ್ಯದೆಲೆ ಮತ್ತು ತೆಂಗಿನಕಾಯಿ ಕೊಟ್ಟಾಗ ಬೇಟೆ ಕಡಿಯುತ್ತಾರೆ. ಅವರು ಬೇಟೆಯನ್ನು ಕಡಿದಾಗ ರೊಪ್ಪದಲ್ಲಿರುವ ದೇವರೆತ್ತುಗಳ ತೀರ್ಥವನ್ನು (ಗಂಜಲು) ಕಿಲಾರಿ ಹಿಡಿದು ಪೂಜೆಗೆ ಇಟ್ಟಿರುತ್ತಾನೆ. ಈ ತೀರ್ಥವನ್ನು ತೆಗೆದುಕೊಂಡು ಅವನಿಗೆ(ಕುಲಕೆಟ್ಟವನಿಗೆ) ಕುಡಿಸಿ, ಮೈಗೆ ಚಿಮುಕಿಸಿ ರೊಪ್ಪದ ಒಳಗಡೆಗೆ ಬರುವಂತೆ ಹೇಳುತ್ತಾರೆ. ಆನಂತರ ಏಳು ಜನ ಹಿರಿಯರು ತಮ್ಮ ತಟ್ಟೆಯಲ್ಲಿರುವ ಅನ್ನದಲ್ಲಿ ಒಂದೊಂದು ತುತ್ತನ್ನು ಕುಲಗೆಟ್ಟವನಿಗೆ ಕೊಡುತ್ತಾರೆ. ಅದನ್ನು ತಿಂದರೇ ಶುದ್ಧಿಯಾಗುತ್ತಾನೆ ಎಂಬ ನಂಬಿಕೆ. ಹೀಗೆ ಹೊಡೆಸಿಕೊಂಡವನು ಮತ್ತು ಹೊಡೆದವನು ಒಂದೇ ದಿನ ಬರುವುದಿಲ್ಲ. ಬೇರೆ ಬೇರೆ ದಿನ ಬಂದು ಶುದ್ಧರಾಗಿ ಹೋಗುತ್ತಾರೆ. ಈ ಮ್ಯಾಸಬೇಡ ಸಮುದಾಯದಲ್ಲಿ ಜೈಲಿಗೆ ಹೋಗಿ ಬಂದವರು ಕೂಡ ಕುಲಗೆಟ್ಟಿರುತ್ತಾರೆ ಎಂಬ ನಂಬಿಕೆ ಇದೆ. ಅವರು ಜೈಲಿನಿಂದ ಬಂದ ತಕ್ಷಣ ಅವನನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ಅವನು ದೇವರೆತ್ತುಗಳ ರೊಪ್ಪಗಳಿಗೆ ಹೋಗಿ ಶುದ್ಧ ಮಾಡಿಕೊಂಡ ನಂತರವೇ ಅವನನ್ನು ಕುಲಕ್ಕೆ ಸೇರಿಸಿಕೊಂಡು ಮನೆಯೊಳಗೆ ಸೇರಿಸಿಕೊಳ್ಳುತ್ತಾರೆ. ರೊಪ್ಪಗಳಲ್ಲಿ ಈ ಆಚರಣೆಯ ಮಹತ್ವವನ್ನು ತಿಳಿಯಬಹುದು.

**ರೊಪ್ಪಗಳಲ್ಲಿ ಜವಳ ತೆಗೆಸುವ ಆಚರಣೆ**

ಮ್ಯಾಸಬೇಡ ಬುಡಕಟ್ಟು ಸಮುದಾಯದ ಸಂಸ್ಕೃತಿಯಲ್ಲಿ ಜವಳ ತೆಗೆಸುವುದು ಒಂದು ಆಚರಣೆಯಾಗಿ ಕಂಡುಬರುತ್ತದೆ. ಮಗು ಹುಟ್ಟಿದ ಮೂರು ವರ್ಷದೊಳಗೆ ಹುಟ್ಟು ಕೂದಲು ಅಥವಾ ಜವಳ ತೆಗೆಸುವುದು ಒಂದು ಧಾರ್ಮಿಕ ಪದ್ಧತಿಯಾಗಿದೆ. ವಿವಾಹಿತ ದಂಪತಿಗಳಿಗೆ ಮಕ್ಕಳಿಲ್ಲದಿದ್ದಾಗ, ಕಷ್ಟ ನಷ್ಟಗಳಿಗೆ ಗುರಿಯಾದಾಗ ಮತ್ತು ಕೌಟುಂಬಿಕ ಸಮಸ್ಯೆಗಳು ಉದ್ಭವಿಸಿದಾಗ ಮುಂದೆ ಹುಟ್ಟುವ ಅಥವಾ ಹುಟ್ಟಿರುವ ಮಗುವಿಗೆ ಕೂದಲನ್ನು ತಮ್ಮ ಮನೆ ದೇವರ ದೇವರೆತ್ತುಗಳಿಗೆ ಮೀಸಲು ಬಿಡುತ್ತೇವೆ ಎಂದು ಹರಿಕೆ ಕಟ್ಟಿಕೊಂಡಿರುತ್ತಾರೆ. ಮಗು ಹುಟ್ಟಿದ ಐದು ತಿಂಗಳು, ಒಂಬತ್ತು ತಿಂಗಳು, ಒಂದು ವರ್ಷ ಮೂರು ವರ್ಷ ತುಂಬುವದರೊಳಗಾಗಿ ಅವರವರ ಅನುಕೂಲತೆಗೆ ದೇವರೆತ್ತುಗಳ ರೊಪ್ಪಗಳಲ್ಲಿ (ಮುತ್ತೈಗಳ ದೊಡ್ಡಿಯಲ್ಲಿ) ಮಕ್ಕಳನ್ನು ಜವಳ ತೆಗೆಸುತ್ತಾರೆ. ಈ ಎಲ್ಲಾ ಧಾರ್ಮಿಕ ವಿಧಿ ವಿಧಾನಗಳಲ್ಲಿ ಜವಳ ತೆಗೆಸುವ ಕಾರ್ಯಮಾಡುತ್ತಾರೆ. ಈ ಆಚರಣೆಯನ್ನು ಹೀಗೆ ನೋಡಬಹುದು. ರೊಪ್ಪಗಳ ಸನ್ನಿಧಿಯಲ್ಲಿ ಪೂರ್ವಾಭಿಮುಖವಾಗಿ ಕರಿಕಂಬಳಿ ಗದ್ದುಗೆ ಹಾಸಿ ಅಕ್ಕಿಕಾಳಿನ ಅಕ್ಷತೆ ಹಾಕಿ ಕಳಸ ಹೂಡಿ ಕಿಲಾರಿ ಮತ್ತು ಪೂಜಾರಿಗಳಿಂದ ಪೂಜೆಮಾಡಿಸಿ, ಅದರ ಮೇಲೆ ಸೂರ್ಯ ಚಂದ್ರರ ಚಿತ್ರ ಬಿಡಿಸಿ ಲಿಂಗ ವಸ್ತ್ರ ಬಟ್ಟೆ ಹಾಸಿ ತಾಯಿ ಮತ್ತು ಮಗುವನ್ನು ಗದ್ದುಗೆಯ ಮೇಲೆ ಕುಳಿತುಕೊಳ್ಳಲು ಹೇಳುತ್ತಾರೆ. ಸೋದರ ಮಾವನಿಂದ ಮಗುವಿನ ತಲೆಯ ಮೇಲೆ ವೀಳ್ಯದೆಲೆ ಅಥವಾ ಎಲೆಯನ್ನು ಕತ್ತರಿಸುತ್ತಾರೆ. ಈ ತಲೆ ಕೂದಲನ್ನು ಎಲೆ ಅಡಿಕೆಯಲ್ಲಿಟ್ಟು ನಂತರ ಗಂಗೆಯಲ್ಲಿ ಬಿಡುತ್ತಾರೆ.

ಈ ಕಾರ್ಯದಲ್ಲಿ ಕೆಲವರು ಮಾಂಸದ ಊಟ ಮಾಡಿಸುತ್ತಾರೆ, ಇನ್ನು ಕೆಲವರು ಸಿಹಿ ಅಡುಗೆ ಉಗ್ಗಿ ಅನ್ನ ಮಾಡುತ್ತಾರೆ. ಇದು ಆಯಾ ದೈವಗಳ ರೊಪ್ಪಗಳಿಗೆ ತಕ್ಕಂತೆ ಇರುತ್ತದೆ. ಆಹೋಬಲ ನರಸಿಂಹ ಸ್ವಾಮಿ, ಚಿತ್ರಲಿಂಗೇಶ್ವರ, ಕಂಪಳರಂಗ ಸ್ವಾಮಿ ಮುಂತಾದ ದೈವ ಮತ್ತು ವೈಷ್ಣವ ದೈವಗಳ ರೊಪ್ಪಗಳಲ್ಲಿ ಜವಳ ತೆಗೆಸಿದರೆ ಸಿಹಿ ಅಡಿಗೆ ಮಾಡುತ್ತಾರೆ. ದೇರೆವತ್ತುಗಳ ಗೂಡಿಗೆ ಎಡೆಹಾಕಿ ನಂತರ ಊಟ ಮಾಡುವ ಪದ್ಧತಿಯುಂಟು. ಆದರೆ ಜಗಲೂರಜ್ಜ, ಬೋರೆದೇವರು, ಯರಗಟ್ಟನಾಯಕ, ಗಾದ್ರಿಪಾಲನಾಯಕ ದೇವರುಗಳ ರೊಪ್ಪಗಳಲ್ಲಿ ಜವಳ ತೆಗೆಸಿದರೆ ಬೇಟೆ ಕೊಯ್ದು ಮಾಂಸದ ಅಡಿಗೆ ಮಾಡಿ ಎಡೆ ಹಾಕಿ ನಂತರ ಊಟ ಮಾಡುವ ಪದ್ಧತಿ ಈ ಸಮುದಾಯದಲ್ಲಿ ಕಂಡುಬರುತ್ತದೆ.

**ರೊಪ್ಪಗಳ ಬಗ್ಗೆ ಇರುವ ನಂಬಿಕೆಗಳು**

- ರೊಪ್ಪಗಳನ್ನು 'ಮುತ್ತಯ್ಯಗಳ ನಿಧಿ' ಎನ್ನುತ್ತಾರೆ. ಅಲ್ಲದೆ ದೇವರೆತ್ತುಗಳು ಮಲಗಿ ಏಳುವ ರೊಪ್ಪದ ಜಾಗವನ್ನು ದೇವಸ್ಥಾನವೆಂದೇ ಭಾವಿಸುತ್ತಾರೆ. ಈ ಸ್ಥಳಕ್ಕೆ ಚಪ್ಪಲಿಯನ್ನು ಹಾಕಿಕೊಂಡು ಹೋಗುವಂತಿಲ್ಲ. ಕಷ್ಟಕಾರ್ಪಣ್ಯಗಳಿರುವ ಜನಗಳು ಬಂದು ಈ ರೊಪ್ಪದ ದೇವಗಂಪಳದಲ್ಲಿ ರಾತ್ರಿ ಮಲಗುತ್ತಾರೆ. ರೊಪ್ಪದಲ್ಲಿ ಮಲಗಿರುವ ವ್ಯಕ್ತಿಯನ್ನು ಈ ದೇವರೆತ್ತುಗಳು ತುಳಿದರೆ ಅದೃಷ್ಟವೆಂದು ತಿಳಿಯುತ್ತಾರೆ. ಹಾಗೂ ಅವರ ಕಷ್ಟಗಳು ಬಗೆಹರಿಯುತ್ತವೆ ಎಂಬ ನಂಬಿಕೆ ಇದೆ.

- ಮ್ಯಾಸಬೇಡರು ವಾಸಿಸುವ ಹಟ್ಟಿಗಳಲ್ಲಿ ಯಾವುದೇ ಸಮಸ್ಯೆದಲ್ಲಿ ಸಿಲುಕಿ ನ್ಯಾಯ ಏರ್ಪಟ್ಟಿದ್ದರೆ ಅದನ್ನು ತೀರ್ಮಾನಿಸಲು ಹಿರಿಯರು, ನಾಯಕರು ದೇವರೆತ್ತುಗಳ ರೊಪ್ಪಕ್ಕೆ ಹೋಗುತ್ತಾರೆ. ಏಕೆಂದರೆ ತಮ್ಮ ಕುಲ ದೈವಗಳು ವಾಸಿಸುವ ರೊಪ್ಪಗಳಲ್ಲಿ ಸುಳ್ಳು, ಮೋಸದ ಹೇಳಿಕೆಗಳನ್ನು ಹೇಳುವುದಿಲ್ಲವೆಂಬ ನಂಬಿಕೆ ಹಾಗೂ ನ್ಯಾಯ ತೀರ್ಪು ಕೊಡುವವರು ಸತ್ಯದ ಪರವಾಗಿ ನಿಲ್ಲುತ್ತಾರೆ ಎಂಬ ನಂಬಿಕೆ ಇದೆ.
- ಸಮುದಯದಲ್ಲಿ ಯಾವುದೇ ಗಲಾಟೆ ಅಥವಾ ಜಗಳ ನಡೆದಾಗ ಎರಡು ಗುಂಪಿನವರು ಸಂಜೆ ರೊಪ್ಪಗಳ ಕಡೆಗೆ ಬರುತ್ತಾರೆ. ಅವರು ಬರುವಾಗ ರೊಪ್ಪದೊಳಗೆ ನಿಂತಿರುವ ದೇವರೆತ್ತುಗಳು ಕೊಂಬುಗಳನ್ನು ಅಲ್ಲಾಡಿಸಿ ಗಲಭೆ ಎಬ್ಬಿಸಿದರೆ ಅವರು ತಂದಂಹ ಜಗಳ ಅಥವಾ ವ್ಯಾಜ್ಯದ ತೀರ್ಮಾನವಾಗುವುದಿಲ್ಲ ಎಂಬ ನಂಬಿಕೆ. ಹಾಗಾಗಿ ಅಂದು ರೊಪ್ಪಗಳಿಗೆ ಬಂದ ಯಜಮಾನರು ಮತ್ತು ಎರಡು ಗುಂಪಿನವರು ಜನರು ಅಲ್ಲೇ ಮಲಗಿದ್ದು, ಬೆಳಿಗ್ಗೆ ಎದ್ದು ತಮ್ಮ ಚರ್ಚೆ ಆರಂಭಿಸಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ.
- ರೊಪ್ಪಗಳಿಂದ ಮೀಸಲು ಹಾಲು ಬಂದರೆ ಮಾತ್ರ ಹಬ್ಬವನ್ನು ಮಾಡುತ್ತಾರೆ. ದೇವರೆತ್ತುಗಳನ್ನು ಮುತ್ತಯ್ಯಗಳು ಅಥವಾ ಸುರುಬುಗಳು ಎಂಬ ಗೌರವ ಹೆಸರುಗಳಿಂದ ಕರೆಯುತ್ತಾರೆ. ಮುತ್ತಯ್ಯಗಳು ಎಂದರೆ ಸಮುದಾಯದ ಹಿರಿಯರ ಪ್ರತಿರೂಪವಾಗಿ ಈ ಎತ್ತುಗಳನ್ನು ಕಾಣುತ್ತಾರೆ. ಹಾಗಾಗಿ ಮುತ್ತೈಗಳ ನಿಧಿ ಎಂದು ರೊಪ್ಪಗಳನ್ನು ಪೂಜ್ಯಾ ಭಾವನೆಯಿಂದ ಕರೆಯುತ್ತಾರೆ. ಆದ್ದರಿಂದ ರೊಪ್ಪಗಳಿಂದ ಕಿಲಾರಿ ಮೀಸಲು ಹಾಲು ತಂದರೆ ಮಾತ್ರ ದೇವರನ್ನು ಮಾಡಲು ಹಿರಿಯರು ಒಪ್ಪುತ್ತಾರೆ ಎಂಬ ನಂಬಿಕೆ.
- ಸಮುದಾಯದವರು ಹೊಸದಾಗಿ ಮದುವೆಯಾದ ವಧು–ವರರು ಮತ್ತು ಭಕ್ತರು ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಮತ್ತು ನವ ವಧುವರರು ಮಕ್ಕಳ ಫಲಕ್ಕಾಗಿ ರೊಪ್ಪಗಳಲ್ಲಿ ಒಂದು ರಾತ್ರಿ ನಿದ್ದೆಮಾಡಿ ಬರುವುದಾಗಿ ಹರಕೆಯನ್ನು ಮಾಡಿಕೊಳ್ಳುತ್ತಾರೆ. ರೊಪ್ಪಗಳು ಮನೆದೇವರ ದೇವಸ್ಥಾನ ಇದ್ದಹಾಗೆ. ಇಲ್ಲಿಗೆ ಬಂದು ಮಲಗಿ ಹೋದರೆ ವರ್ಷವಿಡಿ ನೆಮ್ಮದಿಯ ಜೀವನ ನಡೆಯುತ್ತದೆ ಎಂಬ ನಂಬಿಕೆ.
- ಕಷ್ಟ–ಕಾರ್ಪಣ್ಯ ಮತ್ತು ಯಾವುದಾದರು ಕೋರ್ಟ್‌ಗಳಲ್ಲಿ ವಿವಾದಗಳಿರುವ ಜನರು ಬಂದು ರೊಪ್ಪಗಳಲ್ಲಿ ರಾತ್ರಿ ದೇವರೆತ್ತುಗಳ ಮಧ್ಯೆ ಮಲಗುತ್ತಾರೆ. ಮಲಗಿರುವಂತಹ ಸಂದರ್ಭದಲ್ಲಿ ಗೂಡಿನಲ್ಲಿರುವ ದನ–ಕರುಗಳು ತುಳಿದರೆ ಅದೃಷ್ಟ ಎಂದು ಭಾವಿಸಿ ಕೋರ್ಟ್‌ನಲ್ಲಿನ ತೀರ್ಪು ನಮ್ಮ ಪರವಾಗಿಯೆ ಕೊಡುತ್ತಾರೆ ಎಂಬ ನಂಬಿಕೆ.
- ದೇವರೆತ್ತುಗಳು ಹೊಲಗಳಲ್ಲಿ ಮೇಯುತ್ತಿದ್ದರೆ ಅವುಗಳನ್ನು ಹೊಡೆಯುವುದಿಲ್ಲ. ಯಾಕೆಂದರೆ ತಮ್ಮ ಹೊಲದಲ್ಲಿ ಮೇಯುವುದರಿಂದ ಬೆಳೆಯು ಸಮೃದ್ಧವಾಗಿ ಬರುತ್ತದೆ ಎಂಬ ನಂಬಿಕೆಯಿದೆ.

**ಕಂದು ಬಣ್ಣದ ದೇವರೆತ್ತಿನ ನಂಬಿಕೆ**

ಈ ರೊಪ್ಪಕ್ಕೆ ಮಕ್ಕಳಾಗದೆ ಇರುವ ಹೆಣ್ಣು ಮಕ್ಕಳು ಹೋಗಿ ಕಂದು ಬಣ್ಣ ದೇವರೆತ್ತಿಗೆ ಪೂಜೆ ಸಲ್ಲಿಸಿ, ನಂತರ ಭಕ್ತಿಯಿಂದ ದೇವರೆತ್ತಿನ ಎದುರಿಗೆ ಕೈಮುಗಿದು ಕುಳಿತುಕೊಂಡರೆ, ಈ ಎತ್ತು ಬಲಗಡೆ ಹೂವನ್ನು ಕೊಟ್ಟರೆ ಅವರಿಗೆ ಮಕ್ಕಳಾಗುತ್ತವೆ. ಎಡಗಡೆಯ ಹೂವನ್ನು ಕೊಟ್ಟರೆ ಮಕ್ಕಳಾಗುವುದಿಲ್ಲ ಎನ್ನುವ ನಂಬಿಕೆಯಿದೆ.

**ಕಪ್ಪು ಬಣ್ಣದ ದೇವರೆತ್ತಿನ ನಂಬಿಕೆ**

ಈ ರೊಪ್ಪದಲ್ಲಿ ಕಪ್ಪು ಬಣ್ಣದ ದೇವರೆತ್ತನ್ನು ಜಾತ್ರೆಯ ಸಮಯದಲ್ಲಿ ಮೊದಲು ಮೆರೆಸುತ್ತಾರೆ. ಹಾಗೆಯೇ ಈ ರೊಪ್ಪದಲ್ಲಿ ಕರಿ ಕಂಬಳಿ ಗದ್ದಿಗೆಯನ್ನು ಹಾಸಿ ಕೈ ಮುಗಿದು ನಿಂತುಕೊಂಡರೆ ಕೆಲಸ ಅಗುವಂತಿದ್ದರೆ ಆ ಹಸು ಕರಿ ಕಂಬಳಿ ಗದ್ದಿಗೆಯ ಮೇಲೆ ಬಂದು ಮಲಗುತ್ತದೆ. ಅಂದುಕೊಂಡ ಕೆಲಸ ಅಗುವುದಿಲ್ಲವೆಂದರೆ ಆ ಹಸು ಮಲಗುವುದಿಲ್ಲ. ಹೆಚ್ಚಾಗಿ ಕೋರ್ಟು ಕಛೇರಿಗಳಲ್ಲಿ  ಕೆಲಸಗಳಿದ್ದರೆ ರೊಪ್ಪಕ್ಕೆ ಭೇಟಿಕೊಟ್ಟು ಕೇಳಿಸುವ ಪದ್ಧತಿ ಇಂದಿಗೂ ಇರುವುದನ್ನು ಕಾಣಬಹುದಾಗಿದೆ.

**ಮ್ಯಾಸಬೇಡ ಸಮುದಾಯದಲ್ಲಿ ಕಿಲಾರಿಗಳ ಮಹತ್ವ**

ಮ್ಯಾಸಬೇಡ ಸಮುದಾಯದಲ್ಲಿ ತಮ್ಮ ದೇವರುಗಳಿಗೆ ಹರಕೆ ಮಾಡಿಕೊಂಡು ಬಿಟ್ಟ ದನಕರುಗಳನ್ನು ಒಂದು ಗೂಡಿಸಿ ಆಯಾ ದೇವರಹಟ್ಟಿಗಳ ಸಮೀಪದ ಕಾಡುಗಳಲ್ಲಿ, ಮೂರು ಅಥವಾ ನಾಲ್ಕು ಕಿ.ಮೀ ದೂರದಲ್ಲಿ ಕಳ್ಳೆ ಬೇಲಿಯಿಂದ ನಿರ್ಮಿಸಿದ ದನದ ಗೂಡುಗಳನ್ನೆ 'ಮುತ್ತೈಗಳ ಗೂಡು ಅಥವಾ ದೇವರ ಎತ್ತುಗಳ ರೊಪ್ಪ' ಎಂದು ಕರೆಯುತ್ತಾರೆ. ಈ ದೇವರ ಎತ್ತುಗಳಲ್ಲಿ ಹಸುಗಳು ಮತ್ತು ಎತ್ತುಗಳು ಕೂಡಿಕೊಂಡಿರುತ್ತವೆ. ಇವುಗಳನ್ನು ಕಾಯುವ ಅಥವಾ ಸಂರಕ್ಷಿಸುವವನನ್ನೆ ಎತ್ತಿನ ಕಿಲಾರಿ ಎಂದು ಕರೆಯುತ್ತಾರೆ. ಇವರ ಕೆಲಸ ಕಟ್ಟೆಮನೆ ಪೂಜಾರಿಯ ಕೆಲಸದಷ್ಟೆ ಪವಿತ್ರವಾದ ವೃತ್ತಿಯಾಗಿ ಕಂಡುಬರುತ್ತದೆ. ಇವರನ್ನು ಸಮುದಾಯದಲ್ಲಿ ಗೌರವದಿಂದ ಕಾಣುತ್ತಾರೆ. ಮ್ಯಾಸಬೇಡರಲ್ಲಿ ಯಾವುದೇ ಹಬ್ಬ, ಜಾತ್ರೆ ಸಂದರ್ಭದಲ್ಲಿ ದೇವರೆತ್ತುಗಳು ಮತ್ತು ಕಿಲಾರಿಗಳು ಅತ್ಯಂತ ಪ್ರಮುಖವಾಗಿ ಕಂಡುಬರುತ್ತಾರೆ.

**ಕಿಲಾರಿ ಪದದ ಅರ್ಥ**

ಕಿಲಾರಿ ಎಂದರೆ ಮ್ಯಾಸಬೇಡ ಸಮುದಾಯದಲ್ಲಿ ದೇವರೆತ್ತುಗಳನ್ನು ಕಾಯುವವನು ಎಂದು ಕರೆಯುತ್ತಾರೆ. ಹಾಗೆಯೇ ಕಿಲಾರಿ ಎಂಬ ಪದದ ಅರ್ಥ ನೋಡುವುದಾದರೆ, ಪದ ಕೋಶಗಳು ಹೇಳುವಂತೆ ಕಿಲಾರ್ ಅಥವಾ ಕಿಲಾರಿ ಎಂದರೆ ದನಗಳ ವಿಶಿಷ್ಟವಾದ ಒಂದು ತಳಿ ಎಂದು ಹೇಳಬಹುದು. ಈ ತಳಿಯ ದನಗಳನ್ನು ಸರ್ಕಾರದ ಅಧೀನದಲ್ಲಿ ಸಾಕಲಾಗುತ್ತಿತ್ತು ಎಂಬುದಾಗಿ ತಿಳಿದು ಬರುತ್ತದೆ. ಕರ್ನಾಟಕದ ಹಲವು ಕಡೆಗಳಲ್ಲಿ ಕಿಲಾರಿದನಗಳು ಕಂಡುಬರುತ್ತವೆ. ಮ್ಯಾಸಬೇಡ ಸಮುದಾಯದಲ್ಲಿ ದೇವರೆಗೆ ಎತ್ತುಗಳನ್ನು ಬಿಟ್ಟಾಗ ಕಿಲಾರಿಗಳು ಇವುಗಳನ್ನು ಪೋಷಣೆ ಮಾಡುತ್ತಾರೆ. ಆದ್ದರಿಂದ ಕಿಲಾರಿ ಎಂಬ ಪದಕ್ಕೆ ಕಾಯುವವನು ಎಂಬ ಸಾಮಾನ್ಯ ಅರ್ಥವಿದೆ. ಇಲ್ಲಿಯ ಎತ್ತಿನ ಕಿಲಾಗಳ ಹಿನ್ನೆಲೆಯೊಳಗೆ ಬಳಕೆ ಗೊಂಡಿರುವಂತದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ದೇವರೆತ್ತಿನ ಕಿಲಾರಿಗಳು ಅತಿ ಗೌರವಾನ್ವಿತರಾಗಿ ಸಮುದಾಯದೊಳಗೆ ಇರುವುದನ್ನು ಕಾಣಬಹುದು.

**ಕಿಲಾರಿಗಳನ್ನು ನೇಮಿಸುವ ಪದ್ಧತಿ**

ಈ ಸಮುದಾಯದಲ್ಲಿ ಕಿಲಾರಿಗಳನ್ನು ನೇಮಿಸುವುದು ಅತ್ಯಂತ ವ್ಯವಸ್ಥಿತವಾದ ಕಾರ್ಯವಾಗಿದೆ. ಸಮುದಾಯದ ಗುಡಿಕಟ್ಟಿನ ಕುಲ ಸಾವಿರದವರು ಮತ್ತು ಹಿರಿಯರು ಸೇರಿ ಒಂದು ಕುಟುಂಬವನ್ನು ಈ ಕಿಲಾರಿ ಕೆಲಸಕ್ಕೆ ನೇಮಿಸುತ್ತಾರೆ. ಈಗಾಗಲೆ ಸುಮಾರು ವರ್ಷಗಳ ಹಿಂದೆಯೇ ಒಂದು ಬೆಡಗಿನವರನ್ನು ನೇಮಿಸಿರುತ್ತಾರೆ. ಈ ಬೆಡಗಿನವರೆ ಕಿಲಾರಿತನ ಮಾಡಬೇಕೆಂದು ನಿಯಮ ಇರುವುದರಿಂದ, ಸಮುದಾಯದ ಹಿರಿಯರು ಕಿಲಾರಿ ವೃತ್ತಿಯನ್ನು ಯಾರು ಮಾಡಬೇಕೆಂಬುದನ್ನು ನಿರ್ಧರಿಸುತ್ತಾರೆ. ಕಿಲಾರಿಗಳನ್ನು ನೇಮಕ ಮಾಡುವಾಗ ಅವರು ದೇವರೆತ್ತುಗಳನ್ನು ಕಾಯುವುದಕ್ಕೆ ಸುಮಾರು ಹದಿನಾರು–ಹದಿನೇಳು ವಯಸ್ಸಿನ ಹುಡುಗನು ಕಿಲಾರಿಯಾಗಲು ಅರ್ಹನಿರುತ್ತಾನೆ. ಆ ಹುಡುಗ ಎತ್ತಿನ ಕಿಲಾರಿಯಾಗಿ ದೇವರ ಪೂಜಾರಿಯಿಂದ ದೀಕ್ಷೆ ಪಡೆದು ಕಿಲಾರಿಯಾಗುತ್ತಾನೆ.

ಮ್ಯಾಸಬೇಡ ಸಮುದಯದಲ್ಲಿ ಎತ್ತಿನ ಕಿಲಾರಿಗಳಿಗೆ ವಿಶೇಷ ಗೌರವ ಮತ್ತು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಕೆಲವೊಂದು ನ್ಯಾಯ ತೀರ್ಮಾನ ಮಾಡುವ ಸಂದರ್ಭಗಳಲ್ಲಿ ಗುಡಿಕಟ್ಟೆ, ಕಟ್ಟೆಮನೆ, ಗುರುಸಂಸ್ಥಾನಗದ ಯಜಮಾನರು ನ್ಯಾಯ ತೀರ್ಮಾನ ಮಾಡುವಾಗ ತಪ್ಪಿತಸ್ಥರಿಗೆ ಕೆಲವೊಂದು ಸಾಮಾಜಿಕ ನಿರ್ಬಂಧಗಳನ್ನು ಹಾಕಿ ಎತ್ತೈಗಳ ಹಟ್ಟಿಯ, ಎತ್ತಿನ ಕಿಲಾರಿಯಿಂದ ತೀರ್ಥ ಅಥವಾ ಗೊಗಂಜು ಹಾಕಿಸಿಕೊಂಡು ಪರಿಶುದ್ಧರಾಗಿ ಬರಬೇಕೆಂದು ತೀರ್ಪುಗಳು ಕೊಡುತ್ತಿದ್ದರು. ಆದ್ದರಿಂದ ಎತ್ತೈಗಳ ಹಟ್ಟಿಯನ್ನು ಧಾರ್ಮಿಕ ಪವಿತ್ರ ಪುಣ್ಯ ಕ್ಷೇತ್ರವೆಂದು ನಂಬಿದ್ದಾರೆ. ಮದುವೆ ಮಂಗಳ ಕಾರ್ಯಗಳಲ್ಲಿ ಹೆಣ್ಣು ಮೈನೆರೆದಾಗ, ಮಕ್ಕಳ ನಾಮಕರಣ ಮಾಡಿದಾಗ, ರೋಗಗಳಿಂದ ಬಳಲುತ್ತಿದ್ದಾಗ ಹಟ್ಟಿಯಲ್ಲಿ ನ್ಯಾಯ ತೀರ್ಮಾನವಾಗದಿದ್ದಾಗ ಮತ್ತು ಸಾವು ನೋವುಗಳು ಸಂಭವಿಸಿದಾಗ ಮ್ಯಾಸಬೇಡರು ಎತ್ತೈಗಳ ಹಟ್ಟಿಗೆ ಬರುತ್ತಾರೆ. ಬಂದು ಎತ್ತಿನ ಕಿಲಾರಿಗಳು ಕೊಡುವ ಹಾಲು, ಮೊಸರು, ಮಜ್ಜಿಗೆ ಮತ್ತು ಅಂಬಲಿಯನ್ನು ಪ್ರಸಾದವನ್ನಾಗಿ ಸ್ವೀಕರಿಸಿ ಹೋಗುತ್ತಾರೆ. ಮ್ಯಾಸಬೇಡರ ಹಟ್ಟಿಗಳಲ್ಲಿ ಗುಗ್ಗರಿ ಹಬ್ಬ ನಡೆಯುವಾಗ ಕಿಲಾರಿ ದೇವರ ಎತ್ತುಗಳ ರೊಪ್ಪದಿಂದ ಮೀಸಲು ಹಾಲು ಮತ್ತು ಬೆಣ್ಣೆಯನ್ನು ತಂದು ದೇವರಿಗೆ ಅರ್ಪಿಸಿದ ನಂತರವೆ ದೇವರ ಮುಂದಿನ ಕಾರ್ಯಗಳು ಆರಂಭವಾಗುತ್ತವೆ. ಗುಗ್ಗರಿ ಹಬ್ಬದ ಸಮಯದಲ್ಲಿ ರೊಪ್ಪದಲ್ಲಿರುವ ದೇವರ ಎತ್ತುಗಳು ತಮ್ಮ ದೇವರ ಪೌಳಿಗಳ ಹತ್ತಿರ ಕಿಲಾರಿಗಳ ಸಮ್ಮುಖದಲ್ಲಿ ಮೆರೆಸುತ್ತಾರೆ.

**ಕಿಲಾರಿಗಳ ವೇಷ ಭೂಷಣ**

ದೇವರ ಎತ್ತುಗಳನ್ನು ಕಾಯುವ ಕಿಲಾರಿಗಳಿಗೆ ಕುಲಸಾವಿರದವರಿಂದ ಮತ್ತು ಹಿರಿಯರಿಂದ ದೈವ ದೀಕ್ಷೆಯಾಗಿರುತ್ತದೆ. ಇವರು ದೀಕ್ಷೆಯಾದ ದಿನದಿಂದ ಮೈಗೆ ಪೂರ್ತಿ ಬಟ್ಟೆ ಧರಿಸುವುದಿಲ್ಲ. ತಲೆಗೆ ಒಂದು ಪೇಟ ಅಥವಾ ರುಮಾಲು ಸೊಂಟಕ್ಕೆ ಒಂದು ಪಂಚೆ ಅಥವಾ ಒಂದು ಚಲ್ಲಣ(ಉದ್ದವಾಗಿರುವ ಚಡ್ಡಿ), ಹೊದಿಕೆಯಾಗಿ ಒಂದು ಹಚ್ಚಡ, ಹೆಗಲ ಮೇಲೊಂದು ಕರಿ ಕಂಬಳಿ, ಕೈಯಲ್ಲಿ ಬಿದುರಿನ ಕೋಲು ಮತ್ತು ಕಂಕುಳಲ್ಲಿ ನೀರಿನ ಕುಡಿಕೆ ಇದೆ ಕಿಲಾರಿಗಳ ಸಾಮಾನ್ಯ ವೇಷ ಭೂಷಣ.

**ಕಿಲಾರಿಗಳ ಜೀವನ ನಿರ್ವಹಣೆ**

ಕಿಲಾರಿಗಳ ಜೀವನ ನಿರ್ವಹಣೆ ನೋಡುವುದಾದರೆ ಬಹಳ ದಿನಗಳಿಂದಲೂ ಕಾಡಿನಲ್ಲಿಯೆ ದೇವರೆತ್ತುಗಳ ರೊಪ್ಪವನ್ನು ಕಟ್ಟಿಕೊಂಡು ದೇವರೆತ್ತುಗಳನ್ನು ಕಾಯುತ್ತಾ ವಾಸಮಾಡುತ್ತಾರೆ. ಇವರು ಜೀವನ ಪರ್ಯಂತ ದೇವರೆತ್ತುಗಳನ್ನು ಕಾಯುವುದೇ ಪುಣ್ಯದ ಕೆಲಸವೆಂದು ಅವುಗಳನ್ನು ದೇವರ ಸರಿಸಮವೆಂದು ಕಿಲಾರಿಗಳು ನಂಬಿದ್ದಾರೆ. ಹಾಗಾಗಿ ದೇವರೆತ್ತುಗಳ ಗೂಡುಗಳನ್ನು ಅಥವಾ ರೊಪ್ಪವನ್ನು ಬಂದರಿಕೆ ಸೊಪ್ಪು ಮತ್ತು ಲೆಕ್ಕಲಿ ಸೊಪ್ಪಿನಿಂದ ನಿರ್ಮಿಸಿಕೊಂಡು ಇವರು ಹಗಲು– ರಾತ್ರಿ, ಬಿಸಿಲು–ಚಳಿ, ಮಳೆ–ಗಾಳಿ ಎನ್ನದೆ ಸದಾ ದೇವರ ಎತ್ತುಗಳ ಗೂಡಿನಲ್ಲಿಯೆ ಇರುತ್ತಾರೆ. ಈ ರೊಪ್ಪಗಳ ಹತ್ತಿರ ಯಾವುದೇ ಹಾವು, ಚೇಳುಗಳು ಸುಳಿಯುವುದಿಲ್ಲ ಎಂಬುದು ಅವರ ಬಲವಾದ ನಂಬಿಕೆ. ದೇವರೆತ್ತುಗಳನ್ನು ಕಾಯುವ ಕಿಲಾರಿಗಳು ಸರಳ ಜೀವನ ವಿಧಾನವನ್ನು ಹೊಂದಿರುತ್ತಾರೆ. ಇವರು ಬೆಳಗ್ಗೆ ಎದ್ದ ತಕ್ಷಣವೇ ಇಬ್ಬರು ಕಿಲಾರಿಗಳು ರೊಪ್ಪದಲ್ಲಿರುವ ದನಕರುಗಳನ್ನು ಹೊರಗೆ ಬಿಡುತ್ತಾರೆ. ಅವುಗಳು ಮೇಯಲು ಹೋಗದೆ ರೊಪ್ಪದ ಹೊರಗಡೆಯೆ ಗುಂಪು ಗುಂಪಾಗಿ ನಿಂತಿರುತ್ತವೆ. ಆ ಸಮಯದಲ್ಲಿ ರೊಪ್ಪವನ್ನೆಲ್ಲ ಇಬ್ಬರು ಗುಡಿಸಿ ಸ್ವಚ್ಚ ಮಾಡುತ್ತಾರೆ. ಇನ್ನಿಬ್ಬರು ರೊಪ್ಪದ ದಂಡೆಯ ಗುಡಿಸಿಲಲ್ಲಿ ಅಡುಗೆ ತಯಾರಿಕೆಗೆ ತೊಡುಗುವರು. ಇವರು ಅಡುಗೆ ಮಾಡುವ ವಿಧಾನವೆಂದರೆ ಮೊದಲು ಬೆಂಕಿಯಲ್ಲಿ ಬದನೆಕಾಯಿ ಮತ್ತು ಮೆಣಸಿನಕಾಯಿ, ಈರುಳ್ಳಿಯನ್ನು ಕೆಂಡದಲ್ಲಿ ಸುಡುತ್ತಾರೆ. ಇವುಗಳಿಂದ ಖಾರದ ಚಟ್ನಿಯನ್ನು ತಯಾರಿಸಿಕೊಂಡು, ಅದೆ ಬೆಂಕಿಯ ಮೇಲೆ ರಾಗಿ ಮುದ್ದೆಯನ್ನು ತಯಾರಿಸಿಕೊಳ್ಳುತ್ತಾರೆ. ಇದರೊಂದಿಗೆ ದೇವರೆತ್ತುಗಳ ಹಾಲನ್ನು ಕರೆದು, ಮೊಸರು ಮಾಡಿ, ಮುದ್ದೆ ಮತ್ತು ಚಟ್ನಿ ಜೊತೆಯಲ್ಲಿ ಮೊಸರನ್ನು ಕಲಸಿಕೊಂಡು ಊಟ ಮಾಡುತ್ತಾರೆ. ಇದೆ ಇವರ ದಿನನಿತ್ಯದ ಸರಳವಾದ ಆಹಾರವಾಗಿದೆ.

ಭಕ್ತರು ನೀಡುವ ದವಸ ಧಾನ್ಯಗಳೆ ಇವರ ಜೀವನ ನಿರ್ವಹಣೆಗೆ ಆಧಾರ. ಸುಗ್ಗಿಯ ಕಾಲದಲ್ಲಿ ಕಿಲಾರಿಗಳು ಭಕ್ತರ ಕಣಗಳಿಗೆ ಭೇಟಿ ನೀಡಿ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಕಿಲಾರಿ ಹೋಗದೆ ಇದ್ದರೂ ಸಹ ಕೆಲವು ಭಕ್ತರು ಕಿಲಾರಿಯ ಮನೆಗೆ ತಮ್ಮ ಭಕ್ತಿಯ ಸ್ವರೂಪವನ್ನು ದವಸದ ಧಾನ್ಯದ ರೂಪದಲ್ಲಿ ಒಪ್ಪಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ದೇವರಿಗೆ ಅರ್ಪಿಸುವ ಕಾಯಿ, ಕಾಸು–ಮೀಸಲು ಕೂಡ ಕಿಲಾರಿಗಳ ಜೀವನ ನಿರ್ವಹಣೆಗೆ ಪೂರಕವಾಗುತ್ತಿವೆ.

ಕಿಲಾರಿ ಏನು ಸನ್ಯಾಸಿಯಲ್ಲ ಅವನು ಸಂಸಾರಿ. ಊರಿನ ಹಟ್ಟಿಯೊಳಗಿರುವ ತನ್ನ ಸಂಸಾರದ ಸದಸ್ಯರನ್ನು ಆಗಾಗ್ಗೆ ಹೋಗಿ ಭೇಟಿಯಾಗಿ ಬರುತ್ತಾನೆ. ಒಕ್ಕಲು ಮೇಲೆ ಹೋಗಿ ತನ್ನ ಸಂಸಾರಕ್ಕೆ ಬೇಕಾದ ದವಸ ಧಾನ್ಯ, ಹಣ ಸಂಗ್ರಹಿಸಿಕೊಂಡು ಬಂದು ತನ್ನ ಸಂಸಾರಕ್ಕೆ ಕೊಡುತ್ತಾನೆ. ಆದರೆ ಕಿಲಾರಿ ಮನೆಯ ಹೆಣ್ಣು ಮಕ್ಕಳು ವಾರದ ದಿನ (ಸಾಮಾನ್ಯವಾಗಿ ಭಾನುವಾರ) ಬಿಟ್ಟು ಬೇರೆ ದಿನಗಳಲ್ಲಿ ರೊಪ್ಪದ ಬಳಿ ಹೋಗುವಂತಿಲ್ಲ. ಇವರ ವಿಶೇಷವೆನೆಂದರೆ ಅತಿಯಾದ ಮಡಿವಂತಿಕೆ. ಕಿಲಾರಿಗಳು ತಮ್ಮ ಮನೆಯಲ್ಲಿಯೇ ಬೇರೆ ಸದಸ್ಯರು ಊಟ ಮಾಡಿದ ತಟ್ಟೆಯಲ್ಲಿ ಊಟಮಾಡುವುದಿಲ್ಲ. ಬೇರೆಯವರ ಮನೆಯಲ್ಲಿ ಊಟ ಮಾಡುವುದಿಲ್ಲ. ಅಥವಾ ಊಟ ಮಾಡುವ ಪ್ರಸಂಗ ಬಂದರೆ ಅವರದ್ದೆ ಆದ ಪ್ರತ್ಯೇಕ ದೊನ್ನೆಯಲ್ಲಿ (ಕಿಲಾರಿಗಳ ಪ್ರತ್ಯೇಕವಾದ ತಟ್ಟೆ) ತಿನ್ನುತ್ತಾರೆ. ಕಿಲಾರಿಗಳ ಪ್ರಯಾಣ ಏನಿದ್ದರೂ ಕಾಲ್ನಡಿಗೆಯಲ್ಲಿ

ನಡೆದುಕೊಂಡೆ ಹೋಗುತ್ತಾರೆ. ಅದ್ದರಿಂದ ಇವರು ಪಟ್ಟಣಗಳಿಗೆ ಹೋಗುವುದೇ ಅಪರೂಪವಾಗಿ ಕಂಡುಬರುತ್ತದೆ.

**ಕಿಲಾರಿಗಳ ವಿಧಿ–ನಿಷೇಧಗಳು**

- ಕಿಲಾರಿಗಳು ಯಾವುದೇ ಪಟ್ಟಣಗಳಿಗೆ ಹೋದರು ಬಸ್ಸು, ಬೈಕ್ ಹತ್ತುವುದಿಲ್ಲ, ನಡೆದುಕೊಂಡೆ ಹೋಗುತ್ತಾರೆ.
- ಕಿಲಾರಿಗಳು ಪಟ್ಟಣಗಳಿಗೆ ಹೋದರೆ ಅಲ್ಲಿನ ಹೋಟೆಲ್‌ಗಳಲ್ಲಿ ಊಟ ಮಾಡುವಂತಿಲ್ಲ
- ಕಿಲಾರಿಯು ರೊಪ್ಪದಿಂದ ದೇವರಿಗೆ ಮೀಸಲು ಹಾಲು ತರುವಾಗ ಬರಿಗಾಲಿನಲ್ಲಿ ನಡೆದುಕೊಂಡೆ ಬಂದು ಹಾಲನ್ನು ಅರ್ಪಿಸಬೇಕು.
- ಕಿಲಾರಿಗಳು ಹಿಂದೆ ಕ್ಷೌರವನ್ನು ಮಾಡಿಸುವಂತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಈ ನಿಷೇಧವು ಸಡಿಲವಾಗಿರುವುದು ಕಂಡುಬರುತ್ತದೆ.
- ಕಿಲಾರಿಯ ಕಂಬಳಿ ಮತ್ತು ಬೆತ್ತದ ಕೋಲನ್ನು ಬೇರೆಯವರು ಬಳಸುವಂತಿಲ್ಲ.
- ಇವರು ಕಂಚು, ಅಲ್ಯೂಮಿನಿಯಂ, ಸ್ಟೀಲು ಪಾತ್ರೆಗಳನ್ನು ಬಳಸುವುದಿಲ್ಲ ಏನಿದ್ದರೂ ಮಡಿಕೆ, ಕುಡಿಕೆ ಮಗಿ, ಗಡಿಗೆ ಹೀಗೆ ಮಣ್ಣಲ್ಲಿ ತಯಾರಿಸಿದ ಪಾತ್ರೆಗಳನ್ನು ಬಳಸಬೇಕು ಎಂಬ ನಿಯಮವಿದೆ. ಈ ಪಾತ್ರೆಗಳನ್ನು ಬಳಸುವುದರಿಂದ ನಮ್ಮ ಮಡಿವಂತಿಕೆ ಶುದ್ಧವಾಗಿರುತ್ತದೆ ಎಂಬ ನಂಬಿಕೆ ಇದೆ.
- ಇವರು ಈಚಲು ಮರದಿಂದ ತಯಾರಾದ ಯಾವುದೇ ವಸ್ತುಗಳನ್ನು ಬಳಸುವುದಿಲ್ಲ.
- ಕಿಲಾರಿಗಳು ಪೋಲಿಸ್ ಠಾಣೆ, ಕೋರ್ಟ್–ಕಛೇರಿಗಳಿಗೆ ಹೋಗುವಂತಿಲ್ಲ.
- ಕಿಲಾರಿಯ ಹೆಂಡತಿ ಕಾಲಿಗೆ ಕಾಲು ಗೆಜ್ಜೆಗಳನ್ನು ತೊಡುವಂತಿಲ್ಲ, ಯಾಕೆಂದರೆ ದೇವರೆತ್ತುಗಳಿಗೆ ಕಾಲು ಕಡಗ ಮತ್ತು ಕಾಲು ಗೆಜ್ಜೆಗಳನ್ನು ತೊಡುವುದರಿಂದ ಇವರ ಹೆಂಡತಿಯರು ತೊಡುವಂತಿಲ್ಲ.
- ಕಿಲಾರಿಗಳು ಜೀವನಾವರ್ತನ ಆಚರಣೆಗಳಾದ ಋತುಮತಿ ಹಾಗೂ ಸಾವಿನ ಆಚರಣೆಗಳಿಗೆ ಭಾಗವಹಿಸುವಂತಿಲ್ಲ.
- ಕಿಲಾರಿಯು ಬಣ್ಣ ಬಣ್ಣ ವಸ್ತ್ರಗಳನ್ನು ಧರಿಸದೆ ಬಿಳಿ ವಸ್ತ್ರಗಳಿಂದ ಸಿದ್ದಪಡಿಸಿದ ಉಡುಪುಗಳನ್ನಷ್ಟೆ ಧರಿಸುತ್ತಾರೆ.

**ಸಮಾರೋಪ**

ಒಟ್ಟಾರೆಯಾಗಿ ಮ್ಯಾಸಬೇಡ ಸಮುದಾಯದಲ್ಲಿ ರೊಪ್ಪ, ದೇವರೆತ್ತುಗಳು ಮತ್ತು ಕಿಲಾರಿಗಳಿಗೆ ಒಂದು ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಇವರಲ್ಲಿ ನಡೆಯುವ ಯಾವುದೇ ಹಬ್ಬ, ಜಾತ್ರೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ದೇವರೆತ್ತುಗಳು ಮತ್ತು ಕಿಲಾರಿಗಳ ಪಾತ್ರ ವಿಶಿಷ್ಟವಾಗಿ ಕಂಡುಬರುತ್ತದೆ, ಸಮುದಾಯದಲ್ಲಿ ಇವರನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ. ಕಿಲಾರಿಗಳು ದೇವರೆತ್ತುಗಳನ್ನು ಕಾಯುವುದು ಪರಂಪರಾನುಗತದಿಂದ ಬಂದಿದೆ, ಈ ವೃತ್ತಿಯಿಂದ ಕಿಲಾರಿಗಳಿಗೆ ಯಾವುದೇ ಆರ್ಥಿಕ

ಆದಾಯ ಇಲ್ಲದಿದ್ದರೂ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಲು ಇದನ್ನು ಮುಂದುವರೆಸಿಕೊಂಡು ಬರುವುದನ್ನು ಕಾಣಬಹುದು. ವರ್ತಮಾನದಲ್ಲಿ ಕಿಲಾರಿಗಳ ಜೀವನ ಪದ್ಧತಿ ಕೊಂಚ ಬದಲಾವಣೆಯತ್ತ ಸಾಗಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಅನ್ನಪೂರ್ಣಮ್ಮ. (2008). *ಮ್ಯಾಸ ನಾಯಕರ ಸಾಂಸ್ಕೃತಿಕ: ನಾಯಕಿಯರು.* ಕನ್ನಡ ವಿಶ್ವವಿದ್ಯಾಲಯ.
- ತಿಪ್ಪೇಸ್ವಾಮಿ, ಪಿ. (2020). *ಮ್ಯಾಸಬೇಡರ ಮೌಖಿಕ ಕಥನಗಳು.* ಸಿ.ವಿ.ಜಿ ಪಬ್ಲಿಕೇಷನ್.
- ಮುತ್ತಯ್ಯ, ಎಸ್.ಎಂ. (2008). *ಕಿಲಾರಿ ಮ್ಯಾಸಬೇಡರ ಎತ್ತಿನ ಕಿಲಾರಿ ಬೋರಯ್ಯನ ಆತ್ಮಕಥನ.* ಸೃಷ್ಟಿ ಪಬ್ಲಿಕೇಷನ್.
- ಪ್ರಭಾಕರ ಎ.ಎಸ್. (1999). ಮ್ಯಾಸಬೇಡರ ಕಥನಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪ್ರೇಮಪಲ್ಲವಿ, ಸಿ.ಬಿ. *ಮ್ಯಾಸಬೇಡ ಬುಡಕಟ್ಟಿನ ಆರಾಧ್ಯ ದೈವಗಳು: ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.


**ಛಾಯ ಚಿತ್ರಗಳು**




